**Re.No. D. 221**

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

भाग IX अनुभाग 1
**PART IX SECTION 1**
ಭಾಗ IX ವಿಭಾಗ 1

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| सं 1<br>No.1<br>ಸಂಖ್ಯೆ 1 | नई दिल्ली, सोमवार, मार्च 29, 1993<br>New Delhi, Monday, March 29, 1993<br>ನವದೆಹಲಿ, ಸೋಮವಾರ, ಮಾರ್ಚ್ 29, 1993 | चैत्र 09, 1915 (शक)<br>Chaitra 06, 1915 (saka)<br>ಚೈತ್ರ 09, 1915 (ಶಕ) | खंड.14<br>Vol. 14<br>ಸಂಪುಟ. 14 |
|---|---|---|---|

**Ministry of Law, Justice & Company Affairs**
(Legislative Department)
New Delhi, 29th March, 1993

**ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ**
(ವಿಧಾಯೀ ಇಲಾಖೆ)
**ನವದೆಹಲಿ, 29ನೇ ಮಾರ್ಚ್, 1993**

The Translation in Kannada of the following Acts, namely:- (1) The Payment of Wages Act, 1936 (2) The Contempt of Courts Act, 1971 (3) The Special Marriage Act, 1954 (4) The Cattle Trespass Act, 1871 (5) The Minimum Wages Act, 1948 (6) The International Airports Authority Act, 1971 (7) The Scheduled Castes and the Scheduled Tribes (Prevention of Atrocities) Act, 1989 (8) The Registration Act, 1908 (9) The Police Act, 1861 (10) The Legal Services Authorities Act, 1987 (11) The Environment (Protection) Act, 1986 (12) The Ancient Monuments and Archaeological Sites and Remains Act, 1958 (13) The Explosives Act, 1884 (14) The Equal Remuneration Act, 1976 (15) The Probation of Offenders Act, 1958 (16) The Central Reserve Police Force Act, 1949 (17) The Conservation of foreign Exchange And Prevention of Smuggling Activities Act, 1974-are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಮಜೂರಿ ಸಂದಾಯ ಅಧಿನಿಯಮ, 1936 (2) ನ್ಯಾಯಾಲಯ ನಿಂದನೆ ಅಧಿನಿಯಮ, 1971 (3) ವಿಶೇಷ ವಿವಾಹ ಅಧಿನಿಯಮ, 1954 (4) ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ, 1871 (5) ಕನಿಷ್ಠ ಮಜೂರಿ ಅಧಿನಿಯಮ, 1948 (6) ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1971 (7) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 (8) ನೋಂದಣಿ ಅಧಿನಿಯಮ, 1908 (9) ಪೊಲೀಸು ಅಧಿನಿಯಮ, 1861 (10) ಕಾನೂನು ಸೇವಾ ಪ್ರಾಧಿಕಾರ ಅಧಿನಿಯಮ, 1987 (11) ಪರಿಸರ (ಸಂರಕ್ಷಣೆ) ಅಧಿನಿಯಮ, 1986 (12) ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷ ಅಧಿನಿಯಮ, 1958 (13) ಸ್ಫೋಟಕ ಅಧಿನಿಯಮ, 1884 (14) ಸಮಾನ ಪರಿಶ್ರಮ ಧನ ಅಧಿನಿಯಮ, 1976 (15) ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (16) ಕೇಂದ್ರ ರಿಸರ್ವ್ ಪೊಲೀಸು ದಳ ಅಧಿನಿಯಮ, 1949 (17) ವಿದೇಶೀ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ ಅಧಿನಿಯಮ, 1974– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಪೊಲೀಸ್ ಅಧಿನಿಯಮ, 1861

(ಅಧಿನಿಯಮ 1861ರ ಸಂಖ್ಯೆ 5)

(22ನೇ ಮಾರ್ಚ್, 1861)

ಪೊಲೀಸರನ್ನು ನಿಯಂತ್ರಿಸುವುದಕ್ಕಾಗಿ ಅಧಿನಿಯಮ.

ಪ್ರಸ್ತಾವನೆ:—ಪೊಲೀಸರನ್ನು ಮರು ಸಂಘಟನೆ ಮಾಡುವುದು ಮತ್ತು ಅದನ್ನು ಅಪರಾಧವನ್ನು ತಡೆಗಟ್ಟುವುದು ಮತ್ತು ಪತ್ತೆ ಮಾಡುವುದಕ್ಕಾಗಿ ಹೆಚ್ಚು ದಕ್ಷಸಾಧನವನ್ನಾಗಿ ಮಾಡುವುದು ವಿಹಿತವಾಗಿರುವುದರಿಂದ, ಕೆಳಕಂಡಂತೆ ಅಧಿನಿಯಮಿಸಲಾಗಿದೆ:—

1. **ಅರ್ಥವಿವರಣೆ ಖಂಡ:**—ಈ ಅಧಿನಿಯಮದಲ್ಲಿನ ಕೆಳಕಂಡ ಪದಗಳು ಮತ್ತು ಅಭಿವ್ಯಕ್ತಿಗಳು ಅಂಥ ಅರ್ಥಾನ್ವಯಕ್ಕೆ ತದ್ವಿರುದ್ಧವಾಗಿ ವಿಷಯ ಅಥವಾ ಸಂದರ್ಭದಲ್ಲಿ ಏನಾದರೂ ಇದ್ದ ಹೊರತು ಅವುಗಳಿಗೆ ಕೊಟ್ಟ ಅರ್ಥವನ್ನೇ ಹೊಂದಿರತಕ್ಕದು, ಎಂದರೆ:—

"ಜಿಲ್ಲೆಯ ಮ್ಯಾಜಿಸ್ಟ್ರೇಟ್" ಎಂಬ ಪದಗಳು ಜಿಲ್ಲೆಯ ಕಾರ್ಯನಿರ್ವಾಹಕ ಆಡಳಿತದ ಜವಾಬ್ದಾರಿಯನ್ನು ಹೊತ್ತ ಮತ್ತು ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಚಲಾಯಿಸುವ ಅಂಥ ಕಾರ್ಯನಿರ್ವಾಹಕ ಆಡಳಿತದ ಜವಾಬ್ದಾರಿಯನ್ನು ಹೊತ್ತ ಮುಖ್ಯ ಅಧಿಕಾರಿಯನ್ನು ಯಾವುದೇ ಪದನಾಮದಿಂದ ಕರೆದಿರಲಿ ಆ ಮುಖ್ಯ ಅಧಿಕಾರಿ ಎಂಬ ಅರ್ಥವಿರತಕ್ಕದು;

"ಮ್ಯಾಜಿಸ್ಟ್ರೇಟ್" ಎಂಬ ಪದವು ಮ್ಯಾಜಿಸ್ಟ್ರೇಟನ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸುವ ಸಾಮಾನ್ಯ ಪೊಲೀಸ್ ಜಿಲ್ಲೆಯೊಳಗಿನ ಎಲ್ಲಾ ವ್ಯಕ್ತಿಗಳನ್ನು ಒಳಗೊಳ್ಳತಕ್ಕದು;

"ಪೊಲೀಸ್" ಎಂಬ ಪದವು ಈ ಅಧಿನಿಯಮದ ಮೇರೆಗೆ ಭರ್ತಿ ಮಾಡಿಕೊಳ್ಳಲಾಗುವ ಎಲ್ಲಾ ವ್ಯಕ್ತಿಗಳನ್ನು ಒಳಗೊಳ್ಳತಕ್ಕದು;

"ಸಾಮಾನ್ಯ ಪೊಲೀಸ್ ಜಿಲ್ಲೆ" ಎಂಬ ಪದಗಳು ಈ ಅಧಿನಿಯಮವು ಜಾರಿಗೆ ಬರಲು ಆದೇಶಿಸಿರತಕ್ಕಂಥ ಯಾವುದೇ ಪ್ರೆಸಿಡೆನ್ಸಿ, ರಾಜ್ಯಗಳು ಅಥವಾ ಸ್ಥಳ ಅಥವಾ ಯಾವುದೇ ಪ್ರೆಸಿಡೆನ್ಸಿ, ರಾಜ್ಯ ಅಥವಾ ಸ್ಥಳದ ಭಾಗವನ್ನು ಒಳಗೊಳ್ಳತಕ್ಕದು

"ಜಿಲ್ಲಾ ಸೂಪರಿಂಟೆಂಡೆಂಟ್" ಮತ್ತು "ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್" ಎಂಬ ಪದಗಳು ಯಾವುದೇ ಜಿಲ್ಲೆಯಲ್ಲಿ ಈ ಅಧಿನಿಯಮದ ಮೇರೆಗೆ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟನ ಎಲ್ಲಾ ಅಥವಾ ಯಾವುವೇ ಕರ್ತವ್ಯಗಳನ್ನು ನೆರವೇರಿಸಲು ರಾಜ್ಯಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನೇಮಕಗೊಂಡ ಯಾವನೇ ಸಹಾಯಕ ಜಿಲ್ಲಾ ಸೂಪರಿಂಟೆಂಡೆಂಟ್ ಅಥವಾ ಇತರ ವ್ಯಕ್ತಿಯನ್ನು ಒಳಗೊಳ್ಳತಕ್ಕದು;

"ಸ್ವತ್ತು" ಎಂಬ ಪದವು ಯಾವುದೇ ಚರಸ್ವತ್ತು, ಹಣ ಅಥವಾ ಬೆಲೆಯುಳ್ಳ ಭದ್ರತೆಯನ್ನು ಒಳಗೊಳ್ಳತಕ್ಕದು;

"ವ್ಯಕ್ತಿ" ಎಂಬ ಪದವು ಕಂಪನಿ ಅಥವಾ ನಿಗಮವನ್ನು ಒಳಗೊಳ್ಳತಕ್ಕದು;

"ತಿಂಗಳು" ಎಂಬ ಪದಕ್ಕೆ ಕ್ಯಾಲೆಂಡರ್ ತಿಂಗಳು ಎಂದು ಅರ್ಥವಿರತಕ್ಕದು;

"ಜಾನುವಾರು" ಎಂಬ ಪದವು ಕೊಂಬುಗಳುಳ್ಳ ಜಾನುವಾರುಗಳ ಜೊತೆಗೆ ಆನೆಗಳು, ಒಂಟೆಗಳು, ಕುದುರೆಗಳು, ಕತ್ತೆಗಳು, ಹೇಸರಕತ್ತೆಗಳು, ಕುರಿಗಳು, ಮೇಕೆಗಳು ಮತ್ತು ಹಂದಿಯನ್ನು ಒಳಗೊಳ್ಳತಕ್ಕದು;

ಪೊಲೀಸ್ ದಳದ ಅಧೀನ ದರ್ಜೆಗಳಿಗೆ ಮಾಡಿದ ಉಲ್ಲೇಖಗಳನ್ನು ಡೆಪ್ಯುಟಿ ಸೂಪರಿಂಟೆಂಡೆಂಟರ ದರ್ಜೆಗಿಂತ ಕೆಳಗಿನ ಆ ದಳದ ಸದಸ್ಯರಿಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದು.

2. **ದಳದ ರಚನೆ:**—ರಾಜ್ಯ ಸರ್ಕಾರದ ಅಧೀನದಲ್ಲಿರುವ ಇಡೀ ಪೊಲೀಸ್ ಸಿಬ್ಬಂದಿಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಒಂದು ಪೊಲೀಸ್ ದಳವೆಂಬುದಾಗಿ ಭಾವಿಸತಕ್ಕದು ಮತ್ತು ಅದನ್ನು ವಿಧ್ಯುಕ್ತವಾಗಿ ಭರ್ತಿ ಮಾಡತಕ್ಕದು; ಮತ್ತು ಅದು ರಾಜ್ಯಸರ್ಕಾರವು ಕಾಲಕಾಲಕ್ಕೆ ಆದೇಶಿಸತಕ್ಕಂಥ ರೀತಿಯಲ್ಲಿ ಅಂಥ ಸಂಖ್ಯೆಯ ಅಧಿಕಾರಿಗಳು ಮತ್ತು ವ್ಯಕ್ತಿಗಳನ್ನು ಒಳಗೊಂಡಿರತಕ್ಕದು ಮತ್ತು ಅದನ್ನು ಅಂಥ ರೀತಿಯಲ್ಲಿ ರಚಿಸತಕ್ಕದು.

ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಯಾವುದೇ ಪೊಲೀಸ್ ದಳದ ಅಧೀನ ದರ್ಜೆಗಳ ಸದಸ್ಯರ ವೇತನ ಮತ್ತು ಇತರ ಎಲ್ಲಾ ಸೇವಾ ಷರತ್ತುಗಳು ರಾಜ್ಯಸರ್ಕಾರವು ನಿರ್ಧರಿಸಬಹುದಾದಂಥವು ಆಗಿರತಕ್ಕದು.

3. **ರಾಜ್ಯಸರ್ಕಾರದಲ್ಲಿ ಅಧೀಕ್ಷಣೆ:**—ಸಾಮಾನ್ಯ ಪೊಲೀಸ್ ಜಿಲ್ಲೆಯಾದ್ಯಂತ ಪೊಲೀಸ್ ಅಧೀಕ್ಷಣೆಯು ಅಂಥ ಜಿಲ್ಲೆಯು ಯಾವ ರಾಜ್ಯಸರ್ಕಾರದ ಅಧೀನದಲ್ಲಿದೆಯೋ ಆ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದು ಮತ್ತು ಅದು ಅದನ್ನು ಚಲಾಯಿಸತಕ್ಕದು; ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಧಿಕೃತಗೊಳಿಸಿದಂತೆ ಅಲ್ಲದೆ ಯಾವನೇ ಪೊಲೀಸ್ ಕಾರ್ಯನಿರ್ವಾಹಕನನ್ನು ಅಧಿಕ್ರಮಿಸಲು ಅಥವಾ ನಿಯಂತ್ರಿಸಲು ಯಾವನೇ ವ್ಯಕ್ತಿ, ಅಧಿಕಾರಿ ಅಥವಾ ನ್ಯಾಯಾಲಯವನ್ನು ರಾಜ್ಯಸರ್ಕಾರವು ಶಕ್ತಗೊಳಿಸತಕ್ಕದಲ್ಲ.

4. **ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮುಂತಾದವರು:**—ಸಾಮಾನ್ಯ ಪೊಲೀಸ್ ಜಿಲ್ಲೆಯಾದ್ಯಂತ ಪೊಲೀಸಿನ ಆಡಳಿತವು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಎಂದು ಕರೆಯಲಾಗುವ ಅಧಿಕಾರಿಯಲ್ಲಿ ಮತ್ತು ರಾಜ್ಯಸರ್ಕಾರವು ಸೂಕ್ತವೆಂದು ಭಾವಿಸುವಂಥ ಉಪ-ಇನ್ಸ್‌ಪೆಕ್ಟರ್ ಜನರಲ್‌ಗಳು ಮತ್ತು ಸಹಾಯಕ ಇನ್ಸ್‌ಪೆಕ್ಟರ್ ಜನರಲ್‌ಗಳಲ್ಲಿ ನಿಹಿತವಾಗಿರತಕ್ಕದು.

ಜಿಲ್ಲಾ ಮ್ಯಾಜಿಸ್ಟ್ರೇಟನ ಸ್ಥಳೀಯ ಅಧಿಕಾರ ವ್ಯಾಪ್ತಿಯಾದ್ಯಂತ ಪೊಲೀಸಿನ ಆಡಳಿತವು ಅಂಥ ಮ್ಯಾಜಿಸ್ಟ್ರೇಟನ ಸಾಮಾನ್ಯ ನಿಯಂತ್ರಣ ಮತ್ತು ನಿರ್ದೇಶನದಡಿಯಲ್ಲಿ ಜಿಲ್ಲಾ ಸೂಪರಿಂಟೆಂಡೆಂಟನಲ್ಲಿ ಮತ್ತು ರಾಜ್ಯ ಸರ್ಕಾರವು ಅವಶ್ಯವೆಂದು ಪರ್ಯಾಲೋಚಿಸುವಂಥ ಜಿಲ್ಲಾ ಸಹಾಯಕ ಸೂಪರಿಂಟೆಂಡೆಂಟರುಗಳಲ್ಲಿ ನಿಹಿತವಾಗಿರತಕ್ಕದು.

**5. ಇನ್ಸ್‌ಪೆಕ್ಟರ್ ಜನರಲ್ಲನ ಅಧಿಕಾರಗಳು; ಅಧಿಕಾರಗಳನ್ನು ಚಲಾಯಿಸುವುದು:**—ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲನು ಸಾಮಾನ್ಯ ಪೊಲೀಸ್ ಜಿಲ್ಲೆಯಾದ್ಯಂತ ಮ್ಯಾಜಿಸ್ಟ್ರೇಟನ ಸಂಪೂರ್ಣ ಅಧಿಕಾರಗಳನ್ನು ಹೊಂದಿರತಕ್ಕದ್ದು; ಆದರೆ ರಾಜ್ಯಸರ್ಕಾರವು ಕಾಲಕಾಲಕ್ಕೆ ವಿಧಿಸಬಹುದಾದಂಥ ಪರಿಮಿತಿಗೆ ಒಳಪಟ್ಟು ಆ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**6.** (ನಿರಸಿತ)

**7. ಕೆಳದರ್ಜೆ ಅಧಿಕಾರಿಗಳ ನೇಮಕಾತಿ, ವಜಾ, ಇತ್ಯಾದಿ:**—ಸಂವಿಧಾನದ **311**ನೇ ಅನುಚ್ಛೇದದ ಉಪಬಂಧಗಳು ಮತ್ತು ಈ ಅಧಿನಿಯಮದ ಮೇರೆಗೆ ರಾಜ್ಯಸರ್ಕಾರವು ಕಾಲಕಾಲಕ್ಕೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಇನ್ಸ್‌ಪೆಕ್ಟರ್ ಜನರಲ್, ಉಪ-ಇನ್ಸ್‌ಪೆಕ್ಟರ್ ಜನರಲ್‌ಗಳು, ಸಹಾಯಕ ಇನ್ಸ್‌ಪೆಕ್ಟರ್ ಜನರಲ್‌ಗಳು ಮತ್ತು ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟರುಗಳು ಯಾವುದೇ ಕಾಲದಲ್ಲಿ, ಯಾವನನ್ನು ಅವನ ಕರ್ತವ್ಯ ನಿರ್ವಹಣೆಯಲ್ಲಿ ಅಜಾಗರೂಕತೆ ಅಥವಾ ನಿರ್ಲಕ್ಷ್ಯತೆ ಉಳ್ಳವರೆಂದು ಅಥವಾ ಅದಕ್ಕಾಗಿ ಅನರ್ಹರೆಂದು ಅವರು ಯೋಚಿಸುವ ಆ ಅಧೀನ ದರ್ಜೆಗಳ ಯಾವನೇ ಪೊಲೀಸ್ ಅಧಿಕಾರಿಯನ್ನು ವಜಾ ಮಾಡಬಹುದು, ಅಮಾನತುಗೊಳಿಸಬಹುದು ಅಥವಾ ದರ್ಜೆಯಲ್ಲಿ ಇಳಿಸಬಹುದು.

ಅಥವಾ ತನ್ನ ಕರ್ತವ್ಯವನ್ನು ಅಜಾಗರೂಕತೆ ಅಥವಾ ನಿರ್ಲಕ್ಷ್ಯ ರೀತಿಯಲ್ಲಿ ನಿರ್ವಹಿಸತಕ್ಕ ಅಥವಾ ತನ್ನದೇ ಆದ ಯಾವುದೇ ಕಾರ್ಯದ ಮೂಲಕ ಅದನ್ನು ನಿರ್ವಹಿಸುವುದಕ್ಕಾಗಿ ಅವನನ್ನು ಅನರ್ಹಗೊಳಿಸತಕ್ಕ ಅಧೀನ ದರ್ಜೆಗಳ ಯಾವನೇ ಪೊಲೀಸ್ ಅಧಿಕಾರಿಗೆ ಕೆಳಕಂಡ ಯಾವುದೇ ಒಂದು ಅಥವಾ ಅದಕ್ಕಿಂತ ಹೆಚ್ಚಿನ ದಂಡನೆಗಳನ್ನು ವಿಧಿಸಬಹುದು. ಎಂದರೆ:—

(ಕ) ಒಂದು ತಿಂಗಳ ವೇತನವನ್ನು ಮೀರದ ಯಾವುದೇ ಮೊಬಲಗಿನ ಜುಲ್ಮಾನೆ;

(ಖ) ದಂಡನೆ, ಡ್ರಿಲ್ಲು, ಹೆಚ್ಚಿನ ಪಹರೆ, ದಣಿವು ಅಥವಾ ಇತರ ಕರ್ತವ್ಯಗಳೊಂದಿಗೆ ಅಥವಾ ಅವಿಲ್ಲದೆ ಹದಿನೈದು ದಿವಸಗಳಿಗೆ ಮೀರದ ಅವಧಿಗಾಗಿ ಕ್ವಾರ್ಟರ್ಸ್‌ನಲ್ಲಿ ನಿರೋಧದಲ್ಲಿರುವುದು;

(ಗ) ಒಳ್ಳೆಯ ನಡತೆಯ ಬಗ್ಗೆ ವೇತನವನ್ನು ತಪ್ಪಿಸುವುದು;

(ಘ) ಘನತೆಯ ಅಥವಾ ವಿಶೇಷ ಉಪಲಬ್ಧಿಯ ಯಾವುದೇ ಪದದಿಂದ ತೆಗೆದು ಹಾಕುವುದು.

**8. ಪೊಲೀಸ್ ಅಧಿಕಾರಿಗಳಿಗೆ ಪ್ರಮಾಣಪತ್ರಗಳು:**— 4ನೇ ಪ್ರಕರಣದಲ್ಲಿ ನಮೂದಿಸಲಾದ ಅಧಿಕಾರಿಯನ್ನು ಹೊರತುಪಡಿಸಿ ಪೊಲೀಸ್ ದಳಕ್ಕೆ ನೇಮಕಗೊಂಡ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ಅವನು ನೇಮಕಗೊಂಡ ಮೇಲೆ ಈ ಅಧಿನಿಯಮಕ್ಕೆ ಲಗತ್ತಿಸಿದ ನಮೂನೆಯಲ್ಲಿ ಪ್ರಮಾಣಪತ್ರವನ್ನು ಇನ್ಸ್‌ಪೆಕ್ಟರ್ ಜನರಲ್ ಅಥವಾ ಇನ್ಸ್‌ಪೆಕ್ಟರ್ ಜನರಲ್ಲನು ನೇಮಕ ಮಾಡತಕ್ಕಂಥ ಇತರ ಅಧಿಕಾರಿಯ ಮೊಹರಿನೊಂದಿಗೆ ಪ್ರಮಾಣಪತ್ರವನ್ನು ಸ್ವೀಕರಿಸತಕ್ಕದ್ದು. ಅದರಿಂದಾಗಿ ಅಂಥ ಪ್ರಮಾಣಪತ್ರವನ್ನು ಹೊಂದಿರುವ ವ್ಯಕ್ತಿಯಲ್ಲಿ ಪೊಲೀಸ್ ಅಧಿಕಾರಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ವಿಶೇಷಾಧಿಕಾರಗಳು ನಿಹಿತವಾಗತಕ್ಕದ್ದು.

**ಪ್ರಮಾಣ ಪತ್ರವನ್ನು ಒಪ್ಪಿಸುವುದು:**— ಅಂಥ ಪ್ರಮಾಣಪತ್ರವು ಅದರಲ್ಲಿ ಹೆಸರಿಸಿದ ವ್ಯಕ್ತಿಯು ಯಾವುದೇ ಕಾರಣಕ್ಕಾಗಿ ಪೊಲೀಸ್ ಅಧಿಕಾರಿಯಾಗಿರುವುದು ನಿಂತು ಹೋದಾಗಲೆಲ್ಲಾ ಪರಿಣಾಮಕಾರಿಯಾಗಿರುವುದು ಕೊನೆಗೊಳ್ಳತಕ್ಕದ್ದು ಮತ್ತು ಅವನು ಅಂಥ ಅಧಿಕಾರಿಯಾಗಿರುವುದು ನಿಂತುಹೋದ ಮೇಲೆ ಅವನು ಸದರಿ ಪ್ರಮಾಣಪತ್ರವನ್ನು ಸ್ವೀಕರಿಸಲು ಶಕ್ತಗೊಳಿಸಲಾದ ಯಾವನೇ ಅಧಿಕಾರಿಗೆ ಅದನ್ನು ಒಪ್ಪಿಸತಕ್ಕದ್ದು.

ಪೊಲೀಸ್ ಅಧಿಕಾರಿಯನ್ನು ಅವನ ಪದದಿಂದ ಅಮಾನತುಗೊಳಿಸಿದ ಕಾರಣದಿಂದಾಗಿ ಪೊಲೀಸ್ ಅಧಿಕಾರಿಯಾಗಿರುವುದು ನಿಂತು ಹೋಗತಕ್ಕದ್ದಲ್ಲ. ಅಂಥ ಅಮಾನತ್ತಿನ ಅವಧಿಯಲ್ಲಿ ಪೊಲೀಸ್ ಅಧಿಕಾರಿಯೆಂದು ಅವನಲ್ಲಿ ನಿಹಿತವಾಗಿದ್ದ ಅಧಿಕಾರಗಳು, ಪ್ರಕಾರ್ಯಗಳು ಮತ್ತು ವಿಶೇಷಾಧಿಕಾರಗಳು ತಹಕೂಪಿನಲ್ಲಿ ಇರತಕ್ಕದ್ದು, ಆದರೆ ಅವನು ಅವನನ್ನು ಅಮಾನತ್ತುಗೊಳಿಸಲಾಗಿಲ್ಲದಿದ್ದರೆ ಹೇಗೋ ಹಾಗೆ ಅದೇ ಜವಾಬ್ದಾರಿಗಳು, ಶಿಸ್ತು, ಮತ್ತು ದಂಡನೆಗಳು ಮತ್ತು ಅದೇ ಪ್ರಾಧಿಕಾರಿಗಳಿಗೆ ಒಳಪಟ್ಟಿರುವುದು ಮುಂದುವರೆಯತಕ್ಕದ್ದು.

**9. ಪೊಲೀಸ್ ಅಧಿಕಾರಿಗಳು ಅನುಮತಿ ಇಲ್ಲದೆ ಅಥವಾ ಎರಡು ತಿಂಗಳ ನೋಟೀಸು ಕೊಡದೇ ರಾಜೀನಾಮೆ ಕೊಡತಕ್ಕದ್ದಲ್ಲ:**—ಯಾವನೇ ಪೊಲೀಸ್ ಅಧಿಕಾರಿಯು ಅವನ ಪದದ ಕರ್ತವ್ಯಗಳಿಂದ ಅವನು ಹಿಂದೆಗೆಯಲು ಜಿಲ್ಲಾ ಸೂಪರಿಂಟೆಂಡೆಂಟ್ ಅಥವಾ ಅಂಥ ಅನುಮತಿಯನ್ನು ಕೊಡಲು ಅಧಿಕೃತನಾದ ಇತರ ಅಧಿಕಾರಿಯು ಹಾಗೆ ಮಾಡಲು ಸ್ಪಷ್ಟವಾಗಿ ಅನುಮತಿಸಿದ ಹೊರತು ಅವನ ಪದದ ಕರ್ತವ್ಯಗಳಿಂದ ಅವನು ಹಿಂದೆ ಸರಿಯಲು ಅಥವಾ ರಾಜೀನಾಮೆ ಕೊಡುವ ಅವನ ಉದ್ದೇಶವನ್ನು ತಿಳಿಸಿ, ಎರಡು ತಿಂಗಳುಗಳಿಗೆ ಕಡಿಮೆಯಿಲ್ಲದ ಅವಧಿಯ ಬರಹದಲ್ಲಿನ ನೋಟೀಸನ್ನು ತನ್ನ ಮೇಲಧಿಕಾರಿಗೆ ಅವನು ಕೊಟ್ಟಿದ್ದ ಹೊರತು, ಜಿಲ್ಲಾ ಸೂಪರಿಂಟೆಂಡೆಂಟನ ಅನುಮತಿಯಿಲ್ಲದೆ ತನ್ನ ಪದಕ್ಕೆ ರಾಜೀನಾಮೆ ಕೊಡಲು ಸ್ವತಂತ್ರನಾಗಿರತಕ್ಕದ್ದಲ್ಲ.

**10. ಪೊಲೀಸ್ ಅಧಿಕಾರಿಗಳು ಬೇರೆ ನಿಯೋಜನೆಯಲ್ಲಿ ತೊಡಗತಕ್ಕದ್ದಲ್ಲ:**—ಯಾವನೇ ಪೊಲೀಸ್ ಅಧಿಕಾರಿಯು ಇನ್ಸ್‌ಪೆಕ್ಟರ್ ಜನರಲ್ಲನು ಹಾಗೆ ಮಾಡಲು ಸ್ಪಷ್ಟವಾಗಿ ಅನುಮತಿಸಿದ್ದ ಹೊರತು ಈ ಅಧಿನಿಯಮದ ಮೇರೆಗೆ ಅವನ ಕರ್ತವ್ಯಗಳನ್ನು ಹೊರತುಪಡಿಸಿ ಯಾವುದೇ ನಿಯೋಜನೆ ಅಥವಾ ಎಂಥದೇ ಕೆಲಸದಲ್ಲಿ ತೊಡಗತಕ್ಕದ್ದಲ್ಲ.

**11.** (ನಿರಸಿತ)

**12. ನಿಯಮಗಳನ್ನು ರಚಿಸಲು ಇನ್ಸ್‌ಪೆಕ್ಟರ್ ಜನರಲ್ಲನ ಅಧಿಕಾರ:**—ರಾಜ್ಯ ಸರ್ಕಾರದ ಅನುಮೋದನೆಗೆ ಒಳಪಟ್ಟು, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲನು ಕಾಲಕಾಲಕ್ಕೆ ಪೊಲೀಸು ದಳದ ಸಂಘಟನೆ, ವರ್ಗೀಕರಣ ಮತ್ತು ವಿತರಣೆ, ದಳದ ಸದಸ್ಯರು ವಾಸಿಸತಕ್ಕಂಥ ಸ್ಥಳಗಳು ಮತ್ತು ಅವರು ನೆರವೇರಿಸಬೇಕಾದ ನಿರ್ದಿಷ್ಟ ಸೇವೆಗಳು; ಅವರ ಪರಿಶೀಲನೆ ಮತ್ತು ಅವರಿಗೆ ಒದಗಿಸಬೇಕಾದ ಆಯುಧಗಳು, ವೇಷಭೂಷಣಗಳು ಮತ್ತು ಇತರ ಅವಶ್ಯಕತೆಗಳ ವಿವರಣೆ; ಗುಪ್ತವಾರ್ತೆ ಮತ್ತು ಅವರು ಮಾಹಿತಿಗಳನ್ನು ಸಂಗ್ರಹಿಸುವುದು ಮತ್ತು ತಿಳಿಸುವುದು—ಇವುಗಳಿಗೆ ಸಂಬಂಧಪಟ್ಟಂತೆ ಅವನು ವಿಹಿತವೆಂದು ಭಾವಿಸುವಂಥ ಆದೇಶಗಳು ಮತ್ತು ನಿಯಮಗಳು ಮತ್ತು ಪೊಲೀಸ್

ದಳಕ್ಕೆ ಸಂಬಂಧಿಸಿದಂತೆ ಕರ್ತವ್ಯದ ದುರುಪಯೋಗ ಅಥವಾ ನಿರ್ಲಕ್ಷ್ಯವನ್ನು ತಡೆಗಟ್ಟುವುದಕ್ಕಾಗಿ ಮತ್ತು ಅದರ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಂಥ ದಳವನ್ನು ದಕ್ಷಗೊಳಿಸುವುದಕ್ಕಾಗಿ ಇನ್‌ಸ್ಪೆಕ್ಟರ್ ಜನರಲ್ಲನು ಕಾಲಕಾಲಕ್ಕೆ ವಿಹಿತವೆಂದು ಭಾವಿಸುವಂತೆ ಪೊಲೀಸು ದಳಕ್ಕೆ ಸಂಬಂಧಪಟ್ಟಂತೆ ಎಲ್ಲ ಅಂಥ ಇತರ ಆದೇಶಗಳು ಮತ್ತು ನಿಯಮಗಳನ್ನು ರಚಿಸಬಹುದು.

**13. ವ್ಯಕ್ತಿಗಳ ವೆಚ್ಚದಲ್ಲಿ ನಿಯೋಜಿತರಾದ ಹೆಚ್ಚಿನ ಪೊಲೀಸ್ ಅಧಿಕಾರಿಗಳು:**—ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಅಥವಾ ಯಾವನೇ ಉಪಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಅಥವಾ ಸಹಾಯಕ ಇನ್‌ಸ್ಪೆಕ್ಟರ್ ಜನರಲ್ಲನಿಗೆ ಅಥವಾ ಜಿಲ್ಲಾ ಸೂಪರಿಂಟೆಂಡೆಂಟನಿಗೆ ಆ ಜಿಲ್ಲೆಯ ಮ್ಯಾಜಿಸ್ಟ್ರೇಟನ ಸಾಮಾನ್ಯ ನಿರ್ದೇಶನಕ್ಕೊಳಪಟ್ಟು, ಅದಕ್ಕಾಗಿನ ಅಗತ್ಯತೆಯನ್ನು ತೋರಿಸಿ ಯಾವನೇ ವ್ಯಕ್ತಿಯು ಮಾಡಿಕೊಂಡ ಅರ್ಜಿಯ ಮೇಲೆ ಸಾಮಾನ್ಯ ಪೊಲೀಸು ಜಿಲ್ಲೆಯೊಳಗೆ ಯಾವುದೇ ಸ್ಥಳದಲ್ಲಿ ಶಾಂತಿಪಾಲನೆ ಮಾಡಲು ಹೆಚ್ಚಿನ ಸಂಖ್ಯೆಯ ಪೊಲೀಸು ಅಧಿಕಾರಿಗಳನ್ನು ಪ್ರತಿನಿಯೋಜಿಸುವುದು ಕಾನೂನು ಸಮ್ಮತವಾಗಿರತಕ್ಕುದು. ಅಂಥ ದಳವು ಅನನ್ಯವಾಗಿ ಜಿಲ್ಲಾ ಸೂಪರಿಂಟೆಂಡೆಂಟನ ಆದೇಶಗಳ ಮೇರೆಗೆ ಇರತಕ್ಕುದು ಮತ್ತು ಅರ್ಜಿಯನ್ನು ಮಾಡಿಕೊಂಡ ವ್ಯಕ್ತಿಯ ವೆಚ್ಚದಲ್ಲಿರತಕ್ಕುದು:

ಪರಂತು, ಯಾವ ವ್ಯಕ್ತಿಯ ಅರ್ಜಿಯ ಮೇಲೆ ಅಂಥ ಪ್ರತಿನಿಯೋಜನೆಯನ್ನು ಮಾಡಲಾಗಿರುವುದೋ ಆ ವ್ಯಕ್ತಿಯು ಹಾಗೆ ನಿಯೋಜಿತರಾದ ಪೊಲೀಸ್ ಅಧಿಕಾರಿಗಳನ್ನು ಹಿಂತೆಗೆದುಕೊಳ್ಳತಕ್ಕುದೆಂದು ಇನ್‌ಸ್ಪೆಕ್ಟರ್ ಜನರಲ್, ಉಪಇನ್‌ಸ್ಪೆಕ್ಟರ್ ಜನರಲ್ ಅಥವಾ ಸಹಾಯಕ ಇನ್‌ಸ್ಪೆಕ್ಟರ್ ಜನರಲ್ಲನಿಗೆ ಅಥವಾ ಜಿಲ್ಲಾ ಸೂಪರಿಂಟೆಂಡೆಂಟರಿಗೆ ಒಂದು ತಿಂಗಳ ಬರಹದಲ್ಲಿನ ನೋಟೀಸನ್ನು ಕೊಟ್ಟ ಮೇಲೆ ಅಗತ್ಯಪಡಿಸುವುದು ಅವನಿಗೆ ಕಾನೂನು ಸಮ್ಮತವಾಗಿರತಕ್ಕುದು ಮತ್ತು ಅಂಥ ವ್ಯಕ್ತಿಯನ್ನು, ಅಂಥ ನೋಟೀಸು ಮುಕ್ತಾಯವಾದಂದಿನಿಂದ ಅಂಥ ಹೆಚ್ಚಿನ ದಳದ ಜವಾಬ್ದಾರಿಯಿಂದ ಬಿಡುಗಡೆ ಮಾಡತಕ್ಕುದು.

**14. ರೈಲ್ವೆ ಮತ್ತು ಇತರ ಕಾಮಗಾರಿಗಳ ಆಸುಪಾಸಿನಲ್ಲಿ ಹೆಚ್ಚಿನ ದಳದ ನೇಮಕಾತಿ:**— ದೇಶದ ಯಾವುದೇ ಭಾಗದಲ್ಲಿ ಯಾವುದೇ ರೈಲ್ವೆ, ನಾಲೆ ಅಥವಾ ಇತರ ಲೋಕೋಪಯೋಗಿ ಕಾಮಗಾರಿ ಅಥವಾ ಯಾವುದೇ ನಿರ್ಮಾಣ ಶಾಲೆ ಅಥವಾ ವಾಣಿಜ್ಯ ಸಂಸ್ಥೆಯನ್ನು ನಡೆಸುವಾಗಲೆಲ್ಲಾ ಅಥವಾ ಅದು ಕಾರ್ಯಾಚರಣೆಯಲ್ಲಿರುವಾಗಲೆಲ್ಲಾ ಮತ್ತು ಅಂಥ ಸ್ಥಳದಲ್ಲಿ ಅಂಥ ಕಾಮಗಾರಿ, ನಿರ್ಮಾಣಶಾಲೆ ಅಥವಾ ಸಂಸ್ಥೆಯಲ್ಲಿ ನಿಯೋಜಿತರಾದ ವ್ಯಕ್ತಿಗಳ ನಡವಳಿಕೆಯಿಂದ ಅಥವಾ ನಡವಳಿಕೆಯ ಯುಕ್ತ ಶಂಕೆಯಿಂದ ಅಂಥ ಸ್ಥಳದಲ್ಲಿ ಹೆಚ್ಚಿನ ಪೊಲೀಸ್ ದಳದ ನಿಯೋಜನೆಯು ಅವಶ್ಯವಾಗಿದೆಯೆಂದು ಇನ್‌ಸ್ಪೆಕ್ಟರ್ ಜನರಲ್ಲನಿಗೆ ಕಂಡುಬಂದಾಗಲೆಲ್ಲಾ, ಇನ್‌ಸ್ಪೆಕ್ಟರ್ ಜನರಲ್ಲನು ರಾಜ್ಯಸರ್ಕಾರದ ಸಮ್ಮತಿಯೊಂದಿಗೆ ಅಂಥ ಹೆಚ್ಚಿನ ದಳವನ್ನು ಅಂಥ ಸ್ಥಳಕ್ಕೆ ಪ್ರತಿನಿಯೋಜಿಸುವುದು ಮತ್ತು ಅಗತ್ಯತೆಯು ಮುಂದುವರಿಯುವವರೆಗೆ, ದಳವನ್ನು ನಿಯೋಜಿಸುವುದು, ಮತ್ತು ಅಂಥ ಕಾಮಗಾರಿ ಅಥವಾ ನಿರ್ಮಾಣಶಾಲೆ ಅಥವಾ ಸಂಸ್ಥೆಯನ್ನು ನಡೆಸುವಲ್ಲಿ ಉಪಯೋಗಿಸಿದ ನಿಧಿಗಳ ನಿಯಂತ್ರಣ ಅಥವಾ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಗೆ ಕಾಲಕಾಲಕ್ಕೆ ಹಾಗೆ ಅಗತ್ಯವೆನಿಸಿದ ಹೆಚ್ಚಿನ ದಳಕ್ಕೆ ಸಂದಾಯ ಮಾಡುವುದಕ್ಕಾಗಿ ಆದೇಶಗಳನ್ನು ಮಾಡುವುದು ಅವನಿಗೆ ಕಾನೂನು ಸಮ್ಮತವಾಗಿರತಕ್ಕುದು ಮತ್ತು ಅಂಥ ವ್ಯಕ್ತಿಯು ಆ ತರುವಾಯ ಅದಕ್ಕನುಸಾರವಾಗಿ ಸಂದಾಯ ಮಾಡುವಂತೆ ಮಾಡತಕ್ಕುದು.

**15. ಗಲಭೆ ಪೀಡಿತ ಅಥವಾ ಅಪಾಯಕಾರಿ ಜಿಲ್ಲೆಗಳಲ್ಲಿ ಹೆಚ್ಚಿನ ಪೊಲೀಸನ್ನು ಬಿಡದಿ ಮಾಡುವುದು.** — ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಬೇಕಾದ ಉದ್ಘೋಷಣೆಯ ಮೂಲಕ ಮತ್ತು ರಾಜ್ಯಸರ್ಕಾರವು ನಿರ್ದೇಶಿಸತಕ್ಕಂಥ ಇತರ ರೀತಿಯಲ್ಲಿ ಅದರ ಅಧಿಕಾರಕ್ಕೊಳಪಟ್ಟಿರುವ ಯಾವುದೇ ಪ್ರದೇಶವು ಗಲಭೆ ಪೀಡಿತ ಅಥವಾ ಅಪಾಯಕಾರಿ ಸ್ಥಿತಿಯಲ್ಲಿರುವುದು ಕಂಡು ಬಂದಿದೆ ಎಂದು ಅಥವಾ ಅಂಥ ಪ್ರದೇಶದ ನಿವಾಸಿಗಳ ಅಥವಾ ಅವರ ಯಾವುದೇ ವರ್ಗ ಅಥವಾ ಗುಂಪಿನ ವರ್ತನೆಯಿಂದ ಪೊಲೀಸ್ ಸಂಖ್ಯೆಯನ್ನು ಹೆಚ್ಚಿಸುವುದು ವಿಹಿತವಾಗಿದೆ ಎಂದು ಘೋಷಿಸುವುದು ಅದಕ್ಕೆ ಕಾನೂನು ಬದ್ಧವಾಗಿರತಕ್ಕುದು.

(2) ಆ ತರುವಾಯ ಪೊಲೀಸು ಇನ್‌ಸ್ಪೆಕ್ಟರ್ ಜನರಲ್ಲನಿಗೆ ಅಥವಾ ಈ ಬಗ್ಗೆ ರಾಜ್ಯಸರ್ಕಾರವು ಅಧಿಕೃತಗೊಳಿಸಿದ ಇತರ ಅಧಿಕಾರಿಗೆ ರಾಜ್ಯಸರ್ಕಾರದ ಮಂಜೂರಾತಿಯೊಂದಿಗೆ, ಸಾಮಾನ್ಯವಾಗಿ ನಿಗದಿಪಡಿಸಿದ ದಳದ ಜೊತೆಗೆ ಯಾವುದೇ ಪೊಲೀಸು ದಳವನ್ನು ಇನ್‌ಸ್ಪೆಕ್ಟರ್ ಜನರಲ್ ಹಿಂದೆ ಹೇಳಿದಂಥ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ ಬಿಡದಿ ಮಾಡುವುದು ಕಾನೂನು ಬದ್ಧವಾಗಿರತಕ್ಕುದು.

(3) ಈ ಪ್ರಕರಣದ (5)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಅಂಥ ಹೆಚ್ಚಿನ ಪೊಲೀಸ್ ದಳದ ಖರ್ಚನ್ನು ಆ ಉದ್ಘೋಷಣೆಯಲ್ಲಿ ವಿವರಿಸಿದಂಥ ಪ್ರದೇಶದ ನಿವಾಸಿಗಳು ಭರಿಸತಕ್ಕುದು.

(4) ಆ ಜಿಲ್ಲೆಯ ಮ್ಯಾಜಿಸ್ಟ್ರೇಟನು ಅವನು ಅವಶ್ಯವೆಂದು ಭಾವಿಸುವಂಥ ವಿಚಾರಣೆ ಮಾಡಿದ ತರುವಾಯ ಹಿಂದೆ ಹೇಳಿದಂತೆ ಖರ್ಚನ್ನು ಭರಿಸಲು ಹೊಣೆಗಾರರಾದ ಮತ್ತು ಮುಂದಿನ ಉಪಪ್ರಕರಣದ ಮೇರೆಗೆ ವಿನಾಯಿತಿಗೊಳಿಸಿಲ್ಲದ ನಿವಾಸಿಗಳಲ್ಲಿ ಅಂಥ ಖರ್ಚನ್ನು ಹಂಚತಕ್ಕುದು. ಅಂಥ ಹಂಚಿಕೆಯನ್ನು ಅಂಥ ನಿವಾಸಿಗಳ ಅಂಥ ಪ್ರದೇಶದೊಳಗೆ ಅನುಕ್ರಮವಾದ ಸಾಧನ ಮೂಲಗಳ ಬಗ್ಗೆ ಮಾಜಿಸ್ಟ್ರೇಟನ ತೀರ್ಪಿಗನುಸಾರವಾಗಿ ಮಾಡತಕ್ಕುದು.

(5) ಅಂಥ ವೆಚ್ಚದ ಯಾವುದೇ ಭಾಗವನ್ನು ಭರಿಸುವ ಹೊಣೆಗಾರಿಕೆಯಿಂದ ಯಾರೇ ವ್ಯಕ್ತಿಗಳನ್ನು ಅಥವಾ ಅಂಥ ನಿವಾಸಿಗಳ ವರ್ಗ ಅಥವಾ ಗುಂಪನ್ನು ಆದೇಶದ ಮೂಲಕ ವಿನಾಯಿತಿಗೊಳಿಸುವುದು ರಾಜ್ಯಸರ್ಕಾರಕ್ಕೆ ಕಾನೂನು ಬದ್ಧವಾಗಿರತಕ್ಕುದು.

(6) ಈ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಉದ್ಘೋಷಣೆಯು ಅದು ಜಾರಿಯಲ್ಲಿರಬೇಕಾದಂಥ ಅವಧಿಯನ್ನು ತಿಳಿಸತಕ್ಕುದು, ಆದರೆ ರಾಜ್ಯಸರ್ಕಾರವು ಪ್ರತಿಯೊಂದು ಪ್ರಕರಣದಲ್ಲಿ ನಿರ್ದೇಶಿಸುವುದು ಸೂಕ್ತವೆಂದು ಯೋಚಿಸಬಹುದಾದಂತೆ ಅದನ್ನು ಯಾವುದೇ ಕಾಲದಲ್ಲಿ ಹಿಂತೆಗೆದುಕೊಳ್ಳಬಹುದು ಅಥವಾ ಕಾಲಕಾಲಕ್ಕೆ ಇನ್ನೂ ಹೆಚ್ಚಿನ ಅವಧಿ ಅಥವಾ ಅವಧಿಗಳಿಗಾಗಿ ಮುಂದುವರಿಸಬಹುದು.

ವಿವರಣೆ:— ಈ ಪ್ರಕರಣದ ಉದ್ದೇಶಗಳಿಗಾಗಿ 'ನಿವಾಸಿಗಳು' ಎಂಬುದು ಅಂಥ ಪ್ರದೇಶದಲ್ಲಿ ಭೂಮಿ ಅಥವಾ ಇತರ ಸ್ಥಿರಸ್ವತ್ತನ್ನು ಅವರಾಗಿಯೇ ಆಗಲಿ ಅಥವಾ ಅವರ ಏಜೆಂಟರು ಅಥವಾ ಸೇವಕರ ಮೂಲಕವೇ ಆಗಲಿ ಅಧಿಭೋಗಿಸುವ ಅಥವಾ ಧಾರಣ ಮಾಡುವ ವ್ಯಕ್ತಿಗಳು ಮತ್ತು ಅಲ್ಲಿ ಅವರು ವಾಸ್ತವವಾಗಿ ವಾಸಿಸುತ್ತಿಲ್ಲದಿದ್ದಾಗ್ಯೂ, ಅಂಥ ಪ್ರದೇಶದಲ್ಲಿ ರೈತರು ಅಥವಾ ಅಧಿಭೋಗದಾರರಿಂದ ನೇರವಾಗಿ ಬಾಡಿಗೆಗಳನ್ನು ಅವರಾಗಿಯೇ ಅಥವಾ ಅವರ ಏಜೆಂಟರ ಅಥವಾ ಸೇವಕರ ಮೂಲಕವೇ ಆಗಲಿ ಸಂಗ್ರಹಿಸುವ ಭೂ ಮಾಲೀಕರನ್ನು ಒಳಗೊಳ್ಳುತ್ತದೆ.

15ಕ. ನಿವಾಸಿಗಳ ಅಥವಾ ಭೂಮಿಯಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳ ದುರ್ನಡತೆಯಿಂದ ನೊಂದವರಿಗೆ ನಷ್ಟಪರಿಹಾರವನ್ನು ಕೊಡುವುದು:—

(1) ಯಾವ ಪ್ರದೇಶಕ್ಕೆ ಸಂಬಂಧಪಟ್ಟಂತೆ ಹಿಂದಿನ ಕೊನೆಯ ಪ್ರಕರಣದ ಮೇರೆಗೆ ಅಧಿಸೂಚಿಸಲಾದ ಯಾವುದೇ ಉದ್ಘೋಷಣೆಯು ಜಾರಿಯಲ್ಲಿರುವುದೋ ಆ ಯಾವುದೇ ಪ್ರದೇಶದಲ್ಲಿ ಅಂಥ ಪ್ರದೇಶದ ನಿವಾಸಿಗಳ ಅಥವಾ ಅವರ ಯಾವುದೇ ವರ್ಗ ಅಥವಾ ಗುಂಪಿನ ದುರ್ನಡತೆಯಿಂದ ಮರಣ ಅಥವಾ ತೀವ್ರ ಗಾಯ ಅಥವಾ ಸ್ವತ್ತಿಗೆ ನಷ್ಟ ಅಥವಾ ಹಾನಿ ಉಂಟಾಗಿದ್ದರೆ ಅಥವಾ ಪರಿಣಮಿಸಿದ್ದರೆ ಅಂಥ ದುರ್ನಡತೆಯಿಂದ ಹಾನಿಯನ್ನು ಅನುಭವಿಸಿರುವುದಾಗಿ ಕ್ಲೇಮು ಮಾಡುವ ಅಂಥ ಪ್ರದೇಶದ ನಿವಾಸಿಯಲ್ಲದಿರುವ ಯಾವನೇ ವ್ಯಕ್ತಿಯು, ಹಾನಿಗೊಂಡ ದಿನಾಂಕದಿಂದ ಒಂದು ತಿಂಗಳೊಳಗೆ ಅಥವಾ ನಿಯಮಿಸಬಹುದಾದಂಥ ಇನ್ನೂ ಕಡಿಮೆ ಅವಧಿಯೊಳಗೆ ಅಂಥ ಪ್ರದೇಶವು ಇರುವಂಥ ಜಿಲ್ಲೆಯ ಅಥವಾ ಜಿಲ್ಲೆಯ ಉಪವಿಭಾಗ ಮ್ಯಾಜಿಸ್ಟ್ರೇಟನಿಗೆ ನಷ್ಟ ಪರಿಹಾರಕ್ಕಾಗಿ ಅರ್ಜಿಯನ್ನು ಮಾಡಿಕೊಳ್ಳುವುದು ಅವನಿಗೆ ಕಾನೂನುಬದ್ಧವಾಗಿರತಕ್ಕುದು.

(2) ಆ ತರುವಾಯ ಜಿಲ್ಲಾ ಮ್ಯಾಜಿಸ್ಟ್ರೇಟನು ರಾಜ್ಯಸರ್ಕಾರದ ಅನುಮೋದನೆಯೊಂದಿಗೆ ಅವನು ಅವಶ್ಯವೆಂದು ಭಾವಿಸಬಹುದಾದಂಥ ವಿಚಾರಣೆಯ ತರುವಾಯ ಮತ್ತು ಕೊನೆಯ ಹಿಂದಿನ ಪ್ರಕರಣದ ಮೇರೆಗೆ ಅಂಥ ಪ್ರದೇಶದಲ್ಲಿ ಯಾವುವೇ ಹೆಚ್ಚಿನ ಪೊಲೀಸ್ ದಳ ಬಿಡದಿ ಮಾಡಿರಲಿ ಅಥವಾ ಮಾಡಿಲ್ಲದಿರಲಿ,—

(ಕ) ಅಂಥ ದುರ್ನಡತೆಯಿಂದ ಹಾನಿಯುಂಟಾಗಿರುವ ಅಥವಾ ಪರಿಣಮಿಸಿರುವ ಆ ವ್ಯಕ್ತಿಗಳನ್ನು ಘೋಷಿಸುವುದು;

(ಖ) ಅಂಥ ವ್ಯಕ್ತಿಗಳಿಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊಬಲಗನ್ನು ಮತ್ತು ಅವರುಗಳಲ್ಲಿ ಅದನ್ನು ವಿತರಣೆ ಮಾಡಬೇಕಾದಂಥ ರೀತಿಯನ್ನು ನಿಗದಿಪಡಿಸುವುದು; ಮತ್ತು

(ಗ) ಇನ್ನು ಮುಂದೆ ಮುಂದಿನ ಉಪ—ಪ್ರಕರಣದ ಮೇರೆಗೆ ನಷ್ಟಪರಿಹಾರವನ್ನು ಸಂದಾಯ ಮಾಡುವ ಹೊಣೆಗಾರಿಕೆಯಿಂದ ವಿನಾಯಿತಿಯನ್ನು ಪಡೆದಿರದ ಅರ್ಜಿದಾರನನ್ನು ಹೊರತುಪಡಿಸಿ ಅಂತಹ ಪ್ರದೇಶದ ನಿವಾಸಿಗಳು ಅದನ್ನು ಸಂದಾಯ ಮಾಡತಕ್ಕಂಥ ಅದರ ಪ್ರಮಾಣವನ್ನು ನಿರ್ಧರಿಸುವುದು
—ಅವನಿಗೆ ಕಾನೂನುಬದ್ಧವಾಗಿರತಕ್ಕುದು :

ಪರಂತು, ಮ್ಯಾಜಿಸ್ಟ್ರೇಟನು ಈ ಉಪ—ಪ್ರಕರಣದ ಮೇರೆಗೆ ಯಾವುದೇ ಘೋಷಣೆ ಅಥವಾ ನಿರ್ಧರಣೆಯನ್ನು ಹಿಂದೆ ಹೇಳಿದಂಥ ಹಾನಿಯು ಅಂಥ ಪ್ರದೇಶದೊಳಗೆ ದೊಂಬಿ ಅಥವಾ ಕಾನೂನು ಬಾಹಿರ ಕೂಟದಿಂದ ಉಂಟಾಗಿದೆ ಎಂದು ಮತ್ತು ಹಾನಿಯನ್ನನುಭವಿಸಿದ ವ್ಯಕ್ತಿಯು ಅಂಥ ಹಾನಿಗೆ ಕಾರಣವಾದಂಥ ಘಟನೆಗಳಿಗೆ ಸಂಬಂಧಿಸಿದಂತೆ ಅವನು ಕಾರಣನಲ್ಲವೆಂದು ಅವನು ಅಭಿಪ್ರಾಯಪಟ್ಟ ಹೊರತು ಮಾಡತಕ್ಕುದಲ್ಲ.

(3) ಅಂಥ ನಷ್ಟ ಪರಿಹಾರದ ಯಾವುದೇ ಭಾಗವನ್ನು ಸಂದಾಯ ಮಾಡುವ ಹೊಣೆಗಾರಿಕೆಯಿಂದ ಯಾರೇ ವ್ಯಕ್ತಿಗಳು ಅಂಥ ನಿವಾಸಿಗಳ ವರ್ಗ ಅಥವಾ ಗುಂಪನ್ನು ಆದೇಶದ ಮೂಲಕ ವಿನಾಯಿತಿಗೊಳಿಸುವುದು ರಾಜ್ಯಸರ್ಕಾರಕ್ಕೆ ಕಾನೂನುಬದ್ಧವಾಗಿರತಕ್ಕುದು.

(4) (2)ನೇ ಉಪ—ಪ್ರಕರಣದ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟನು ಮಾಡಿದ ಪ್ರತಿಯೊಂದು ಘೋಷಣೆ ಅಥವಾ ನಿರ್ಧರಣೆ ಅಥವಾ ಮಾಡಿದ ಆದೇಶವು ವಿಭಾಗದ ಕಮಿಷನರ್ ಅಥವಾ ರಾಜ್ಯ ಸರ್ಕಾರದ ಪುನರೀಕ್ಷಣೆಗೆ ಒಳಪಟ್ಟಿರತಕ್ಕುದು. ಆದರೆ ಹಿಂದೆ ಹೇಳಿದುದನ್ನು ಹೊರತುಪಡಿಸಿ, ಅದು ಅಂತಿಮವಾಗಿರತಕ್ಕುದು.

(5) ಈ ಪ್ರಕರಣದ ಮೇರೆಗೆ ನಷ್ಟಪರಿಹಾರವನ್ನು ಕೊಡಲಾಗಿರುವಂಥ ಯಾವುದೇ ಹಾನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ದಾವೆಯು ಊರ್ಜಿತವಾಗತಕ್ಕುದಲ್ಲ.

(6) ವಿವರಣೆ:— ಈ ಪ್ರಕರಣದಲ್ಲಿ 'ನಿವಾಸಿಗಳು' ಎಂಬ ಪದವು ಕೊನೆಯ ಹಿಂದಿನ ಪ್ರಕರಣದಲ್ಲಿರುವ ಅಂಥದೇ ಅರ್ಥವನ್ನು ಹೊಂದಿರತಕ್ಕುದು.

**16.** (1) **13, 14, 15** ಮತ್ತು **15**ಕ ಪ್ರಕರಣಗಳ ಮೇರೆಗೆ ಸಂದಾಯವಾಗಬೇಕಾದ ಹಣಗಳ ವಸೂಲಿ ಮತ್ತು ವಸೂಲಿ ಮಾಡಿದಾಗ ಅದರ ವಿಲೆ:—13, 14, 15 ಮತ್ತು 15ಕ ಪ್ರಕರಣಗಳ ಮೇರೆಗೆ ಸಂದಾಯವಾಗಬೇಕಾದ ಎಲ್ಲಾ ಹಣಗಳು, ಜುಲ್ಮಾನೆಗಳನ್ನು ವಸೂಲಿ ಮಾಡುವುದಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆ, 1882 (1882ರ 10)ರ 386 ಮತ್ತು 387ನೇ ಪ್ರಕರಣಗಳ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಅಥವಾ ಯಾವುದೇ ಸಕ್ಷಮ ನ್ಯಾಯಾಲಯದಲ್ಲಿ ದಾವೆಯ ಮೂಲಕ ವಸೂಲಿ ಮಾಡತಕ್ಕುದು.

(3) 15ಕ ಪ್ರಕರಣದ ಮೇರೆಗೆ ಸಂದಾಯವಾದ ಅಥವಾ ವಸೂಲು ಮಾಡಿದ ಎಲ್ಲಾ ಹಣಗಳನ್ನು ಈ ಪ್ರಕರಣದ ಮೇರೆಗೆ ಅವನ್ನು ಯಾರಿಗೆ ಮತ್ತು ಯಾವ ಪ್ರಮಾಣಗಳಲ್ಲಿ ಸಂದಾಯ ಮಾಡಬೇಕೋ ಆ ವ್ಯಕ್ತಿಗಳಿಗೆ ಮತ್ತು ಆ ಪ್ರಮಾಣಗಳಲ್ಲಿ ಜಿಲ್ಲೆಯ ಮ್ಯಾಜಿಸ್ಟ್ರೇಟನು ಸಂದಾಯ ಮಾಡತಕ್ಕುದು.

**17.** ವಿಶೇಷ ಪೊಲೀಸ್ ಅಧಿಕಾರಿಗಳು:—ಯಾವುದೇ ಕಾನೂನುಬಾಹಿರ ಕೂಟ ಅಥವಾ ದೊಂಬಿ ಅಥವಾ ಶಾಂತಿ ಭಂಗ ಉಂಟಾಗಿರುವುದು ಕಂಡುಬಂದಾಗ ಅಥವಾ ಯುಕ್ತವಾಗಿ ಶಂಕಿಸಬಹುದಾದಾಗ ಮತ್ತು ಶಾಂತಿಪಾಲನೆಗಾಗಿ ಮತ್ತು ಅಂಥ ಕಾನೂನುಬಾಹಿರ ಕೂಟ ಅಥವಾ ದೊಂಬಿ ಅಥವಾ ಶಾಂತಿ ಭಂಗವು ಸಂಭವಿಸಿರುವಂಥ ಸ್ಥಳದಲ್ಲಿ ನಿವಾಸಿಗಳು

ಮತ್ತು ಸ್ವತ್ತಿನ ಸಂರಕ್ಷಣೆಗಾಗಿ ಸಾಮಾನ್ಯವಾಗಿ ನಿಯೋಜಿಸಿದ ಪೊಲೀಸ್ ದಳವು ಅದನ್ನು ಪಾಲಿಸುವುದಕ್ಕಾಗಿ ಸಾಕಷ್ಟಿಲ್ಲವೆಂದು ಕಂಡುಬಂದಾಗ ಇನ್ಸ್‌ಪೆಕ್ಟರ್‌ನ ದರ್ಜೆಗೆ ಕಡಿಮೆಯಿಲ್ಲದ ಯಾವನೇ ಪೊಲೀಸ್ ಅಧಿಕಾರಿಗೆ ಅಂಥ ಪೊಲೀಸು ಅಧಿಕಾರಿಗೆ ಬೇಕಾಗಬಹುದಾದಷ್ಟು ಆಸುಪಾಸಿನ ನಿವಾಸಿಗಳನ್ನು ಅವನು ಅವಶ್ಯವೆಂದು ಭಾವಿಸಬಹುದಾದಂಥ ಕಾಲಕಾಲಕ್ಕೆ ಮತ್ತು ಅಂಥ ಪರಿಮಿತಿಯೊಳಗೆ ವಿಶೇಷ ಪೊಲೀಸ್ ಅಧಿಕಾರಿಗಳೆಂದು ಕಾರ್ಯ ನಿರ್ವಹಿಸಲು ನೇಮಕ ಮಾಡಲು ಅತಿ ಹತ್ತಿರದ ಮ್ಯಾಜಿಸ್ಟ್ರೇಟನಿಗೆ ಅರ್ಜಿ ಮಾಡಿಕೊಳ್ಳುವುದು ಕಾನೂನು ಬದ್ಧವಾಗಿರತಕ್ಕದ್ದು ಮತ್ತು ಅಂಥ ಅರ್ಜಿಯನ್ನು ಮಾಡಿಕೊಳ್ಳಲಾಗಿರುವ ಮ್ಯಾಜಿಸ್ಟ್ರೇಟನು ತದ್ವಿರುದ್ಧವಾದುದಕ್ಕೆ ಅವನು ಕಾರಣವನ್ನು ಕಂಡುಕೊಂಡ ಹೊರತು ಅರ್ಜಿಯನ್ನು ಪುರಸ್ಕರಿಸತಕ್ಕದ್ದು.

**18. ವಿಶೇಷ ಪೊಲೀಸ್ ಅಧಿಕಾರಿಗಳ ಅಧಿಕಾರಗಳು:**—ಹಾಗೆ ನೇಮಕವಾದ ಪ್ರತಿಯೊಬ್ಬ ವಿಶೇಷ ಪೊಲೀಸ್ ಅಧಿಕಾರಿಯು, ಸಾಮಾನ್ಯ ಪೊಲೀಸಿನ ಅಧಿಕಾರಿಗಳ ಹಾಗೆ ಅವೇ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಸಂರಕ್ಷಣೆಯನ್ನು ಹೊಂದಿರತಕ್ಕದ್ದು ಮತ್ತು ಅದೇ ಕರ್ತವ್ಯಗಳನ್ನು ನೆರವೇರಿಸಲು ಬದ್ಧರಾಗಿರತಕ್ಕದ್ದು ಮತ್ತು ಅವೇ ದಂಡನೆಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅವರು ಅದೇ ಪ್ರಾಧಿಕಾರಿಗಳಿಗೆ ಅಧೀನರಾಗಿರತಕ್ಕದ್ದು.

**19 ವಿಶೇಷ ಪೊಲೀಸ್ ಅಧಿಕಾರಿಗಳೆಂದು ಸೇವೆ ಸಲ್ಲಿಸಲು ನಿರಾಕರಿಸುವುದು:**— ಹಿಂದೆ ಹೇಳಿದಂತೆ ವಿಶೇಷ ಪೊಲೀಸ್ ಅಧಿಕಾರಿಯೆಂದು ನೇಮಕಗೊಂಡ ಯಾವನೇ ವ್ಯಕ್ತಿಯು, ಸಾಕಷ್ಟು ಕಾರಣವಿಲ್ಲದೆ ಹಾಗೆ ಸೇವೆ ಸಲ್ಲಿಸಲು ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ ಅಥವಾ ಅವನ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ಅವನಿಗೆ ಕೊಡಬಹುದಾದಂಥ ಕಾನೂನು ಬದ್ಧ ಆದೇಶ ಅಥವಾ ನಿರ್ದೇಶನವನ್ನು ಪಾಲಿಸಲು ತಪ್ಪಿದರೆ, ಅವನು ಮ್ಯಾಜಿಸ್ಟ್ರೇಟನ ಮುಂದೆ ಅಪರಾಧ ನಿರ್ಣಯವಾದ ಮೇಲೆ ಅಂಥ ಪ್ರತಿಯೊಂದು ನಿರ್ಲಕ್ಷ್ಯತೆ, ನಿರಾಕರಣೆ ಅಥವಾ ಅವಿಧೇಯತೆಗಾಗಿ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಗುರಿಯಾಗಿರತಕ್ಕದ್ದು.

**20. ಪೊಲೀಸ್ ಅಧಿಕಾರಿಗಳು ಚಲಾಯಿಸಬೇಕಾದ ಅಧಿಕಾರ:**—ಈ ಅಧಿನಿಯಮದ ಮೇರೆಗೆ ಭರ್ತಿ ಮಾಡಿಕೊಂಡ ಪೊಲೀಸ್ ಅಧಿಕಾರಿಗಳು, ಈ ಅಧಿನಿಯಮದ ಮತ್ತು ದಂಡ ಪ್ರಕ್ರಿಯೆಯನ್ನು ವಿನಿಯಮಿಸುವುದಕ್ಕಾಗಿ ಈ ತರುವಾಯ ಅಂಗೀಕರಿಸತಕ್ಕಂಥ ಯಾವುದೇ ಅಧಿನಿಯಮದ ಮೇರೆಗೆ ಪೊಲೀಸ್ ಅಧಿಕಾರಿಗಾಗಿ ಉಪಬಂಧಿಸಿದ ಅಧಿಕಾರವನ್ನು ಅಲ್ಲದೆ ಬೇರೆ ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

**21. ಗ್ರಾಮ ಪೊಲೀಸ್ ಅಧಿಕಾರಿಗಳು:**—ಈ ಅಧಿನಿಯಮದಲ್ಲಿರುವುದಾವುದೂ ಯಾವನೇ ಆನುವಂಶಿಕ ಅಥವಾ ಇತರ ಗ್ರಾಮ ಪೊಲೀಸ್ ಅಧಿಕಾರಿಗೆ ಈ ಅಧಿನಿಯಮದ ಮೇರೆಗೆ ಅಂಥ ಅಧಿಕಾರಿಯನ್ನು ಪೊಲೀಸ್ ಅಧಿಕಾರಿಯೆಂದು ಭರ್ತಿ ಮಾಡಿಕೊಂಡಿದ್ದ ಹೊರತು, ಬಾಧಕವನ್ನುಂಟು ಮಾಡತಕ್ಕದ್ದಲ್ಲ. ಭರ್ತಿ ಮಾಡಿಕೊಂಡಾಗ ಅಂಥ ಪೊಲೀಸ್ ಅಧಿಕಾರಿಯು ಕೊನೆಯ ಹಿಂದಿನ ಪ್ರಕರಣದ ಉಪಬಂಧಗಳಿಗೆ ಬದ್ಧನಾಗಿರತಕ್ಕದ್ದು. ಯಾವನೇ ಆನುವಂಶಿಕ ಅಥವಾ ಇತರೆ ಗ್ರಾಮ ಪೊಲೀಸ್ ಅಧಿಕಾರಿಯನ್ನು ಅವನ ಸಮ್ಮತಿ ಇಲ್ಲದೆ ಮತ್ತು ನಾಮನಿರ್ದೇಶನದ ಹಕ್ಕನ್ನು ಹೊಂದಿರುವವನ ಸಮ್ಮತಿ ಇಲ್ಲದೆ ಅವನ ಹೆಸರನ್ನು ಭರ್ತಿ ಮಾಡಿಕೊಳ್ಳತಕ್ಕದ್ದಲ್ಲ.

**ಪೋರ್ಟ್ ವಿಲಿಯಂ ಪ್ರೆಸಿಡೆನ್ಸಿಯಲ್ಲಿ ಪೊಲೀಸ್ ಚೌಕೀದಾರರು:**—1856ರ XXನೇ ಅಧಿನಿಯಮದ (ಬಂಗಾಳದಲ್ಲಿ ಪೋರ್ಟ್ ವಿಲಿಯಂ ಪ್ರೆಸಿಡೆನ್ಸಿಯಲ್ಲಿನ ನಗರಗಳು, ಪಟ್ಟಣಗಳು, ಕೇಂದ್ರಗಳು ಮತ್ತು ನಗರದ ಹೊರವಲಯ ಮತ್ತು ಬಜಾರಗಳಲ್ಲಿ ಪೊಲೀಸ್ ಚೌಕೀದಾರರ ನೇಮಕಾತಿ ಮತ್ತು ಅವುಗಳನ್ನಿಟ್ಟುಕೊಂಡು ಬರುವುದಕ್ಕಾಗಿ ಉತ್ತಮ ವ್ಯವಸ್ಥೆಯನ್ನು ಮಾಡಲು) ಮೇರೆಗೆ ನೇಮಕಗೊಂಡ ಯಾವನೇ ಪೊಲೀಸ್ ಅಧಿಕಾರಿಯನ್ನು ಆ ಅಧಿನಿಯಮದ ಮೇರೆಗೆ ಅವನನ್ನು ನೇಮಕ ಮಾಡಿಕೊಂಡಂಥ ಆ ಜಿಲ್ಲೆಯ ಹೊರಗಡೆ ನಿಯೋಜಿಸಿದರೆ, ಅವನಿಗೆ ಆ ಜಿಲ್ಲೆಗಾಗಿ ಸದರಿ ಅಧಿನಿಯಮದ ಮೇರೆಗೆ ವಿಧಿಸಿದ ದರಗಳನ್ನು ಸಂದಾಯ ಮಾಡತಕ್ಕದ್ದಲ್ಲ.

**22. ಪೊಲೀಸ್ ಅಧಿಕಾರಿಗಳು ಸದಾ ಕರ್ತವ್ಯದ ಮೇಲಿರುವುದು ಮತ್ತು ಅವರನ್ನು ಜಿಲ್ಲೆಯ ಯಾವುದೇ ಭಾಗದಲ್ಲಿ ನಿಯೋಜಿಸಬಹುದು:** — ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯನ್ನು ಈ ಅಧಿನಿಯಮದಲ್ಲಿ ಒಳಗೊಂಡಿರುವ ಎಲ್ಲಾ ಉದ್ದೇಶಗಳಿಗಾಗಿ ಸದಾ ಕರ್ತವ್ಯದ ಮೇಲಿರುವುದಾಗಿ ಪರಿಗಣಿಸತಕ್ಕದ್ದು ಮತ್ತು ಅವನನ್ನು ಯಾವುದೇ ಕಾಲದಲ್ಲಿ ಸಾಮಾನ್ಯ ಪೊಲೀಸ್ ಜಿಲ್ಲೆಯ ಯಾವುದೇ ಭಾಗದಲ್ಲಿ ಪೊಲೀಸ್ ಅಧಿಕಾರಿಯೆಂದು ನಿಯೋಜಿಸಬಹುದು.

**23. ಪೊಲೀಸ್ ಅಧಿಕಾರಿಗಳ ಕರ್ತವ್ಯಗಳು :**— ಯಾವನೇ ಸಕ್ಷಮ ಪ್ರಾಧಿಕಾರಿಯು ಕಾನೂನು ಬದ್ಧವಾಗಿ ಕೊಟ್ಟ ಎಲ್ಲಾ ಆದೇಶಗಳು ಮತ್ತು ವಾರೆಂಟುಗಳನ್ನು ತ್ವರಿತವಾಗಿ ಪಾಲಿಸುವುದು ಮತ್ತು ಜಾರಿಗೊಳಿಸುವುದು ; ಮತ್ತು ಸಾರ್ವಜನಿಕ ಶಾಂತಿಗೆ ಬಾಧಕವನ್ನುಂಟುಮಾಡುವ ಗುಪ್ತ ವಾರ್ತೆಗಳನ್ನು ಸಂಗ್ರಹಿಸುವುದು ಮತ್ತು ತಿಳಿಸುವುದು ; ಅಪರಾಧಗಳು ಮತ್ತು ಸಾರ್ವಜನಿಕ ಉಪದ್ರವಗಳನ್ನು ಮಾಡುವುದನ್ನು ತಡೆಗಟ್ಟುವುದು ; ಅಪರಾಧಿಗಳನ್ನು ಪತ್ತೆಹಚ್ಚಿ ಅವರನ್ನು ದಂಡನೆಗೆ ಒಳಪಡಿಸುವುದು ಮತ್ತು ಕಾನೂನು ಸಮ್ಮತವಾಗಿ ಅವನು ಯಾರನ್ನು ದಸ್ತಗಿರಿ ಮಾಡಲು ಅವನನ್ನು ಅಧಿಕೃತಗೊಳಿಸಲಾಗಿದೆಯೋ ಆ ವ್ಯಕ್ತಿಗಳನ್ನು ದಸ್ತಗಿರಿ ಮಾಡುವುದು ಮತ್ತು ಯಾರ ದಸ್ತಗಿರಿಗೆ ಸಾಕಷ್ಟು ಕಾರಣಗಳಿವೆಯೋ ಆ ಎಲ್ಲಾ ವ್ಯಕ್ತಿಗಳನ್ನು ದಸ್ತಗಿರಿ ಮಾಡುವುದು ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಪ್ರತಿಯೊಬ್ಬ ಪೊಲೀಸ್ ಅಧಿಕಾರಿಗೆ ಈ ಪ್ರಕರಣದಲ್ಲಿ ಹೇಳಿದ ಯಾವುದೇ ಉದ್ದೇಶಕ್ಕಾಗಿ ವಾರಂಟ್ ಇಲ್ಲದೆ ಯಾವುದೇ ಕುಡಿಯುವ ಅಂಗಡಿ, ಜೂಜಿನ ಮನೆ ಅಥವಾ ನೀತಿಗೆಟ್ಟ ಮತ್ತು ಅವ್ಯವಸ್ಥಿತ ವ್ಯಕ್ತಿಗಳು ಸೇರುವ ಸ್ಥಳವನ್ನು ಪ್ರವೇಶಿಸುವುದು ಮತ್ತು ಅದನ್ನು ಪರಿಶೀಲಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

**24. ಪೊಲೀಸ್ ಅಧಿಕಾರಿಗಳು ಮಾಹಿತಿ ಇತ್ಯಾದಿಗಳನ್ನು ಕೊಡಬಹುದು:**— ಯಾವನೇ ಪೊಲೀಸ್ ಅಧಿಕಾರಿಗೆ ಮ್ಯಾಜಿಸ್ಟ್ರೇಟನ ಮುಂದೆ ಯಾವುದೇ ಮಾಹಿತಿಯನ್ನು ಕೊಡುವುದು ಮತ್ತು ಅಪರಾಧವನ್ನು ಮಾಡುವ ಯಾವನೇ ವ್ಯಕ್ತಿಯ ವಿರುದ್ಧ ಕಾನೂನು ಮೂಲಕ ಕೊಡಬಹುದಾದ ಸಮನ್ಸ್, ವಾರೆಂಟ್, ಶೋಧನಾ ವಾರಂಟ್ ಅಥವಾ ಇತರ ಕಾನೂನು ಕ್ರಮಗಳಿಗಾಗಿ ಅರ್ಜಿಯನ್ನು ಮಾಡಿಕೊಳ್ಳುವುದು ಯಾವನೇ ಪೊಲೀಸ್ ಅಧಿಕಾರಿಗೆ ಕಾನೂನುಬದ್ಧವಾಗಿರತಕ್ಕದ್ದು.

25. ಪೊಲೀಸ್ ಅಧಿಕಾರಿಗಳು ಕ್ಲೇಮು ಮಾಡದಿರುವ ಸ್ವತ್ತನ್ನು ವಶಕ್ಕೆ ತೆಗೆದುಕೊಳ್ಳುವುದು ಮತ್ತು ಅದರ ವಿಲೇ ಬಗ್ಗೆ ಮ್ಯಾಜಿಸ್ಟ್ರೇಟನ ಆದೇಶಗಳಿಗೆ ಒಳಪಟ್ಟಿರತಕ್ಕುದು:— ಕ್ಲೇಮು ಮಾಡದಿರುವ ಎಲ್ಲಾ ಸ್ವತ್ತುಗಳನ್ನು ವಶಕ್ಕೆ ತೆಗೆದುಕೊಳ್ಳುವುದು ಮತ್ತು ಅದರ ಬಗ್ಗೆ ವಿವರಣಾ ಪಟ್ಟಿಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಒದಗಿಸುವುದು ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯ ಕರ್ತವ್ಯವಾಗಿರತಕ್ಕುದು.

ಪೊಲೀಸ್ ಅಧಿಕಾರಿಗಳು ಅಂಥ ಸ್ವತ್ತಿನ ವಿಲೇಯ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಅವರು ಸ್ವೀಕರಿಸಬಹುದಾದಂಥ ಆದೇಶಗಳ ಮೂಲಕ ಮಾರ್ಗದರ್ಶನ ಪಡೆಯತಕ್ಕುದು.

26. **ಮ್ಯಾಜಿಸ್ಟ್ರೇಟನು ಸ್ವತ್ತನ್ನು ತಡೆಹಿಡಿದಿರಬಹುದು ಮತ್ತು ಉದ್ಘೋಷಣೆಯನ್ನು ಹೊರಡಿಸಬಹುದು :—**

(1) ಜಿಲ್ಲಾ ಮ್ಯಾಜಿಸ್ಟ್ರೇಟನು ಸ್ವತ್ತನ್ನು ತಡೆಹಿಡಿದಿರಿಸಬಹುದು ಮತ್ತು ಅದು ಒಳಗೊಂಡಿರುವಂಥ ವಸ್ತುಗಳನ್ನು ನಿರ್ದಿಷ್ಟಪಡಿಸಿ ಮತ್ತು ಅದರ ಬಗ್ಗೆ ಯಾವುದೇ ಕ್ಲೇಮನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಹಾಜರಾಗಲು ಮತ್ತು ಅಂತಹ ಉದ್ಘೋಷಣೆಯ ದಿನಾಂಕದಿಂದ ಆರು ತಿಂಗಳೊಳಗೆ ಅದರ ಬಗ್ಗೆ ಅವನ ಹಕ್ಕನ್ನು ಸ್ಥಾಪಿಸಲು ಅಗತ್ಯಪಡಿಸಿ ಉದ್ಘೋಷಣೆಯನ್ನು ಹೊರಡಿಸಬಹುದು.

(2) ದಂಡ ಪ್ರಕ್ರಿಯಾ ಸಂಹಿತೆ, 1882ರ (1882ರ 10) 525ನೇ ಪ್ರಕರಣದ ಉಪಬಂಧಗಳು ಈ ಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವತ್ತಿಗೆ ಅನ್ವಯವಾಗತಕ್ಕುದು.

27. **ಯಾವನೇ ಕ್ಲೇಮುದಾರನು ಹಾಜರಾಗದಿದ್ದರೆ ಸ್ವತ್ತಿನ ಅಧಿಹರಣ :—**(1) ಯಾವನೇ ವ್ಯಕ್ತಿಯು ಅಂಥ ಸ್ವತ್ತನ್ನು ಅಥವಾ ಅಂಥ ಸ್ವತ್ತಿನ ಮಾರಾಟ ಮಾಡಿದ್ದರೆ ಅದರ ಉತ್ಪನ್ನಗಳನ್ನು ಅನುಮತಿಸಿದ ಅವಧಿಯೊಳಗೆ ಕ್ಲೇಮು ಮಾಡದಿದ್ದರೆ ಹಿಂದಿನ (1)ನೇ ಉಪ-ಪ್ರಕರಣದ ಮೇರೆಗೆ ಈಗಾಗಲೇ ಮಾರಾಟ ಮಾಡಿಲ್ಲದಿದ್ದರೆ ಅದನ್ನು ಜಿಲ್ಲಾ ಮ್ಯಾಜಿಸ್ಟ್ರೇಟನ ಆದೇಶಗಳ ಮೇರೆಗೆ ಮಾರಾಟ ಮಾಡಬಹುದು.

(2) ಹಿಂದಿನ ಉಪ-ಪ್ರಕರಣದ ಮೇರೆಗೆ ಮಾರಾಟ ಮಾಡಲಾದ ಸ್ವತ್ತಿನ ಮಾರಾಟ ಉತ್ಪನ್ನಗಳು ಮತ್ತು 26ನೇ ಪ್ರಕರಣದ ಮೇರೆಗೆ ಮಾರಾಟ ಮಾಡಿದ ಯಾವ ಸ್ವತ್ತಿಗೆ ಕ್ಲೇಮನ್ನು ಸ್ಥಾಪಿಸಿಲ್ಲವೋ ಆ ಸ್ವತ್ತಿನ ಉತ್ಪನ್ನಗಳು ರಾಜ್ಯ ಸರ್ಕಾರದ ವಶದಲ್ಲಿರತಕ್ಕುದು.

28. **ಪೊಲೀಸ್ ಅಧಿಕಾರಿಗಳಾಗಿರುವುದು ನಿಂತು ಹೋದ ಮೇಲೆ ಪ್ರಮಾಣಪತ್ರ, ಇತ್ಯಾದಿಗಳನ್ನು ವಶಾವಣೆ ಮಾಡಲು ನಿರಾಕರಿಸುವ ವ್ಯಕ್ತಿಗಳು :—** ಈ ಅಧಿನಿಯಮದ ಮೇರೆಗೆ ಭರ್ತಿಯಾದ ಪೊಲೀಸ್ ಅಧಿಕಾರಿಯಾಗಿರುವುದು ನಿಂತುಹೋದ ಪ್ರತಿಯೊಬ್ಬ ವ್ಯಕ್ತಿಯು ಅವನ ಕರ್ತವ್ಯಗಳ ನೆರವೇರಿಕೆಗಾಗಿ ಅವನಿಗೆ ಸರಬರಾಜು ಮಾಡಲಾದಂಥ ಅವನ ಪ್ರಮಾಣಪತ್ರ, ಉಡುಪು, ವೇಷಭೂಷಣಗಳು, ನೇಮಕಾತಿಗಳು ಮತ್ತು ಇತರ ಅವಶ್ಯಕತೆಗಳನ್ನು ತಕ್ಷಣವೇ ವಶಾವಣೆ ಮಾಡದಿರುವ ಪ್ರತಿಯೊಬ್ಬ ವ್ಯಕ್ತಿಯು ಮ್ಯಾಜಿಸ್ಟ್ರೇಟನ ಮುಂದೆ ಅಪರಾಧ ನಿರ್ಣಯವಾದ ಮೇಲೆ ಎರಡು ನೂರು ರೂಪಾಯಿಗಳನ್ನು ಮೀರದ ದಂಡ ಅಥವಾ ಆರು ತಿಂಗಳುಗಳನ್ನು ಮೀರದ ಅವಧಿಯ ಅಥವಾ ಕಠಿಣಶ್ರಮ ಸಹಿತ ಅಥವಾ ಅದಿಲ್ಲದ ಕಾರಾವಾಸಕ್ಕೆ ಅಥವಾ ಅವೆರಡಕ್ಕೂ ಗುರಿಯಾಗತಕ್ಕುದು.

29. **ಕರ್ತವ್ಯ ನಿರ್ಲಕ್ಷ್ಯ ಇತ್ಯಾದಿಗಳಿಗೆ ದಂಡನೆಗಳು :—** ಕರ್ತವ್ಯದ ಯಾವುದೇ ಉಲ್ಲಂಘನೆ ಅಥವಾ ಸಕ್ಷಮ ಪ್ರಾಧಿಕಾರಿಯು ಮಾಡಿದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಕಾನೂನು ಬದ್ಧ ಆದೇಶವನ್ನು ಉದ್ದೇಶಪೂರ್ವಕವಾಗಿ ಭಂಗಮಾಡುವ ಅಥವಾ ನಿರ್ಲಕ್ಷಿಸುವ ತಪ್ಪಿತಸ್ಥನಾಗಿರತಕ್ಕ ಅಥವಾ ಅವನ ಪದದ ಕರ್ತವ್ಯಗಳಿಂದ ಅನುಮತಿಯಿಲ್ಲದೆ ಅಥವಾ ಎರಡು ತಿಂಗಳುಗಳ ಅವಧಿಯ ಪೂರ್ವ ನೋಟೀಸನ್ನು ಕೊಡದೆ ಹಿಂತೆಗೆದುಕೊಳ್ಳತಕ್ಕ ಅಥವಾ ರಜೆಯ ಮೇಲಿದ್ದು ಅಂಥ ರಜೆಯು ಮುಕ್ತಾಯವಾದ ನಂತರ ಯುಕ್ತ ಕಾರಣವಿಲ್ಲದೆ ಕರ್ತವ್ಯಕ್ಕೆ ಹಾಜರಾಗಲು ತಪ್ಪಿದ ಅಥವಾ ಅವನ ಪೊಲೀಸ್ ಕರ್ತವ್ಯವಲ್ಲದ ಯಾವುದೇ ನಿಯೋಜನೆಯಲ್ಲಿ ಅಧಿಕಾರವಿಲ್ಲದೆ ತೊಡಗುವ ಅಥವಾ ಹೇಡಿತನದ ತಪ್ಪಿತಸ್ಥನಾಗಿರುವ ಅಥವಾ ಅವನ ಅಭಿರಕ್ಷೆಯಲ್ಲಿರುವ ಯಾವನೇ ವ್ಯಕ್ತಿಗೆ ಯಾವುದೇ ಅಗತ್ಯವಿಲ್ಲದೆ ವೈಯಕ್ತಿಕವಾಗಿ ಹಿಂಸೆ ಕೊಡುವ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ಮ್ಯಾಜಿಸ್ಟ್ರೇಟನ ಮುಂದೆ ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳುಗಳ ಸಂಬಳವನ್ನು ಮೀರದ ದಂಡ ಅಥವಾ ಮೂರು ತಿಂಗಳು ಅವಧಿಗೆ ಮೀರದಂಥ ಕಠಿಣ ಶ್ರಮ ಅಥವಾ ಅದಿಲ್ಲದ ಕಾರಾವಾಸಕ್ಕೆ ಅಥವಾ ಅವೆರಡಕ್ಕೂ ಗುರಿಯಾಗತಕ್ಕುದು.

30. **ಸಾರ್ವಜನಿಕ ಕೂಟಗಳು ಮತ್ತು ಮೆರವಣಿಗೆಗಳ ನಿಯಂತ್ರಣ ಮತ್ತು ಅವುಗಳಿಗೆ ಲೈಸೆನ್ಸ್ ಕೊಡುವುದು:—**

(1) ಜಿಲ್ಲಾ ಸೂಪರಿಂಟೆಂಡೆಂಟ್ ಅಥವಾ ಸಹಾಯಕ ಜಿಲ್ಲಾ ಸೂಪರಿಂಟೆಂಡೆಂಟನು ಸಂದರ್ಭವು ಅಗತ್ಯಪಡಿಸಿದರೆ, ಸಾರ್ವಜನಿಕ ರಸ್ತೆಗಳ ಮೇಲೆ ಅಥವಾ ಸಾರ್ವಜನಿಕ ಬೀದಿಗಳು ಅಥವಾ ಮುಖ್ಯ ಬೀದಿಗಳಲ್ಲಿ ಎಲ್ಲಾ ಕೂಟಗಳು ಮತ್ತು ಮೆರವಣಿಗೆಗಳನ್ನು ನಡೆಸುವುದನ್ನು ನಿರ್ದೇಶಿಸಬಹುದು ಮತ್ತು ಅಂಥ ಮೆರವಣಿಗೆಗಳು ಯಾವ ಮಾರ್ಗಗಳ ಮೂಲಕ ಮತ್ತು ಯಾವ ಕಾಲಗಳಲ್ಲಿ ಹೋಗಬಹುದೋ ಆ ಮಾರ್ಗಗಳನ್ನು ಮತ್ತು ಕಾಲಗಳನ್ನು ನಿಯಮಿಸಬಹುದು.

(2) ಜಿಲ್ಲೆಯ ಅಥವಾ ಜಿಲ್ಲೆಯ ಉಪ-ವಿಭಾಗದ ಮ್ಯಾಜಿಸ್ಟ್ರೇಟನ ವಿವೇಚನೆಯಲ್ಲಿ ಮೆರವಣಿಗೆಯನ್ನು ನಿಯಂತ್ರಿಸದಿದ್ದರೆ ಶಾಂತಿಗೆ ಭಂಗವನ್ನುಂಟುಮಾಡುವ ಸಂಭವವಿರುವಂಥ ಯಾವುದೇ ವ್ಯಕ್ತಿಗಳು ಅಥವಾ ವ್ಯಕ್ತಿಗಳ ಗುಂಪು ಯಾವುದೇ ಅಂಥ ರಸ್ತೆ, ಬೀದಿ ಅಥವಾ ಮುಖ್ಯಬೀದಿಯಲ್ಲಿ ಕೂಟವನ್ನು ನಡೆಸಲು ಅಥವಾ ಸೇರಿಸಲು ಅಂಥ ಮೆರವಣಿಗೆಯನ್ನು ರೂಪಿಸಲು ಉದ್ದೇಶಿಸಿದ್ದಾರೆಂದು ಅವನಿಗೆ ಮನದಟ್ಟಾದ ಮೇಲೆ ಅಂಥ ಕೂಟವನ್ನು ನಡೆಸುವ ಅಥವಾ ಸೇರಿಸುವ ಅಥವಾ ಅಂಥ ಮೆರವಣಿಗೆಯನ್ನು ನಿರ್ದೇಶಿಸುವ ಅಥವಾ ಪ್ರೋತ್ಸಾಹಿಸುವ ವ್ಯಕ್ತಿಗಳಿಗೆ ಸಾಮಾನ್ಯ ಅಥವಾ ವಿಶೇಷ ನೋಟೀಸಿನ ಮೂಲಕ ಲೈಸೆನ್ಸಿಗೆ ಅರ್ಜಿ ಸಲ್ಲಿಸಬೇಕೆಂದು ಸಹ ಅಗತ್ಯಪಡಿಸಬಹುದು.

(3) ಅಂಥ ಅರ್ಜಿಯನ್ನು ಮಾಡಿಕೊಂಡ ಮೇಲೆ ಲೈಸೆನ್ಸ್‌ದಾರರ ಹೆಸರುಗಳನ್ನು ನಿರ್ದಿಷ್ಟಪಡಿಸಿ ಮತ್ತು ಯಾವ ಷರತ್ತುಗಳ ಮೇಲೆ ಮಾತ್ರವೇ ಅಂಥ ಕೂಟ ಅಥವಾ ಅಂಥ ಮೆರವಣಿಗೆಯನ್ನು ನಡೆಸಲು ಅನುಮತಿಸಬೇಕಾಗಿದೆಯೋ ಆ ಷರತ್ತುಗಳನ್ನು ನಿರ್ಧರಿಸಿ ಮತ್ತು ಈ ಪ್ರಕರಣವನ್ನು ಅನ್ಯಥಾ ಜಾರಿಗೊಳಿಸಲು ಅವನು ಲೈಸೆನ್ಸನ್ನು ಕೊಡಬಹುದು:

ಪರಂತು, ಯಾವುದೇ ಅಂಥ ಲೈಸೆನ್ಸಿಗಾಗಿ ಸಲ್ಲಿಸಲಾದ ಅರ್ಜಿ ಅಥವಾ ಅದರ ಮಂಜೂರಾತಿಗೆ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ.

(4) ಬೀದಿಗಳಲ್ಲಿ ಸಂಗೀತ :— ಉತ್ಸವ, ಹಬ್ಬಗಳು ಮತ್ತು ಸಮಾರಂಭಗಳ ಸಂದರ್ಭದಲ್ಲಿ ಬೀದಿಗಳಲ್ಲಿ ಸಂಗೀತವನ್ನು ಎಷ್ಟರಮಟ್ಟಿಗೆ ಉಪಯೋಗಿಸಬಹುದು ಎಂಬುದನ್ನು ಸಹ ನಿಯಂತ್ರಿಸಬಹುದು.

**30ಕ. ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸುವ ಕೂಟಗಳು ಮತ್ತು ಮೆರವಣಿಗೆಗಳಿಗೆ ಸಂಬಂಧಿಸಿದಂತೆ ಅಧಿಕಾರಗಳು** :—(1) ಯಾವನೇ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ಅಥವಾ ಸಹಾಯಕ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ಅಥವಾ ಪೊಲೀಸ್ ಇನ್ಸ್‌ಪೆಕ್ಟರ್ ಅಥವಾ ಠಾಣೆಯ ಪ್ರಭಾರದಲ್ಲಿರುವ ಯಾವನೇ ಪೊಲೀಸ್ ಅಧಿಕಾರಿಯು ಹಿಂದೆ ಕೊನೆಯಲ್ಲಿ ಹೇಳಿದ ಪ್ರಕರಣದ ಮೇರೆಗೆ ಕೊಟ್ಟ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸುವ ಯಾವುದೇ ಮೆರವಣಿಗೆಯನ್ನು ನಿಲ್ಲಿಸಬಹುದು ಮತ್ತು ಅದನ್ನು ಅಥವಾ ಮೇಲೆ ಹೇಳಿದಂತೆ ಯಾವುವೇ ಅಂಥ ಷರತ್ತುಗಳನ್ನು ಉಲ್ಲಂಘಿಸುವಂಥ ಅಂಥ ಕೂಟವು ಚದುರುವಂತೆ ಆದೇಶಿಸಬಹುದು.

(2) ಹಿಂದೆ ಕೊನೆಯಲ್ಲಿ ಹೇಳಿದ ಉಪ-ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ಆದೇಶವನ್ನು ಪಾಲಿಸಲು ಉಪೇಕ್ಷಿಸುವ ಅಥವಾ ನಿರಾಕರಿಸುವ ಯಾವುದೇ ಮೆರವಣಿಗೆ ಅಥವಾ ಕೂಟವನ್ನು ಕಾನೂನುಬಾಹಿರ ಕೂಟವೆಂದು ಭಾವಿಸತಕ್ಕದ್ದು.

**31. ಸಾರ್ವಜನಿಕ ರಸ್ತೆಗಳು, ಇತ್ಯಾದಿಗಳಲ್ಲಿ ಪೊಲೀಸರು ವ್ಯವಸ್ಥೆಯನ್ನು ಕಾಪಾಡುವುದು** :— ಸಾರ್ವಜನಿಕ ರಸ್ತೆಗಳಲ್ಲಿ ಮತ್ತು ಸಾರ್ವಜನಿಕ ಬೀದಿಗಳಲ್ಲಿ, ಮುಖ್ಯ ರಸ್ತೆಗಳಲ್ಲಿ, ಘಾಟುಗಳು ಮತ್ತು ಇಳಿದಾಣಗಳಲ್ಲಿ ಮತ್ತು ಸಾರ್ವಜನಿಕರು ಸೇರುವ ಎಲ್ಲಾ ಇತರ ಸ್ಥಳಗಳಲ್ಲಿ ವ್ಯವಸ್ಥೆಯನ್ನು ಕಾಪಾಡುವುದು ಮತ್ತು ಸಾರ್ವಜನಿಕ ರಸ್ತೆಗಳಲ್ಲಿ, ಸಾರ್ವಜನಿಕ ಬೀದಿಗಳಲ್ಲಿ ಅಥವಾ ಸಾರ್ವಜನಿಕ ಪೂಜಾ ಕಾಲದಲ್ಲಿ ಪೂಜಾ ಸ್ಥಳಗಳ ಆಸುಪಾಸು ಪ್ರದೇಶಗಳಲ್ಲಿ ಕೂಟಗಳು ಮತ್ತು ಮೆರವಣಿಗೆಗಳನ್ನು ನಡೆಸುವ ಸಂದರ್ಭಗಳಲ್ಲಿ ಯಾವುದೇ ರಸ್ತೆ, ಬೀದಿ, ಮುಖ್ಯರಸ್ತೆ, ಘಾಟು, ಅಥವಾ ಇಳಿದಾಣ ಜನಸಂದಣಿ ಸೇರಬಹುದಾದ ಅಥವಾ ಅಡ್ಡಿಯುಂಟಾಗಬಹುದಾದ ಯಾವುದೇ ಸಂದರ್ಭದಲ್ಲಿ ಅಡ್ಡಿಯನ್ನು ತಡೆಗಟ್ಟುವುದು ಪೊಲೀಸರ ಕರ್ತವ್ಯವಾಗಿರತಕ್ಕದ್ದು.

**32. ಕೊನೆಯ ಹಿಂದಿನ ಮೂರು ಪ್ರಕರಣಗಳ ಮೇರೆಗೆ ಹೊರಡಿಸಿದ ಆದೇಶಗಳನ್ನು ಉಲ್ಲಂಘಿಸಿದ್ದಕ್ಕೆ ದಂಡನೆ ಇತ್ಯಾದಿ**: — ಕೊನೆಯ ಹಿಂದಿನ ಮೂರು ಪ್ರಕರಣಗಳ ಮೇರೆಗೆ ಹೊರಡಿಸಿದ ಆದೇಶಗಳನ್ನು ವಿರೋಧಿಸುವ ಅಥವಾ ಪಾಲಿಸದಿರುವ ಅಥವಾ ಜಿಲ್ಲಾ ಪೊಲೀಸು ಸೂಪರಿಂಟೆಂಡೆಂಟನು ಅಥವಾ ಸಹಾಯಕ ಪೊಲೀಸು ಸೂಪರಿಂಟೆಂಡೆಂಟನು ಸಂಗೀತ ಉಪಯೋಗಿಸುವುದಕ್ಕಾಗಿ ಅಥವಾ ಕೂಟಗಳು ಮತ್ತು ಮೆರವಣಿಗೆಗಳನ್ನು ನಡೆಸುವುದಕ್ಕಾಗಿ ಕೊಟ್ಟ ಯಾವುದೇ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸುವ ಪ್ರತಿಯೊಬ್ಬ ವ್ಯಕ್ತಿಯು ಮ್ಯಾಜಿಸ್ಟ್ರೇಟನ ಮುಂದೆ ಅಪರಾಧ ನಿರ್ಣಯವಾದ ಮೇಲೆ ಎರಡು ನೂರು ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

**33. ಜಿಲ್ಲಾ ಮಾಜಿಸ್ಟ್ರೇಟನ ನಿಯಂತ್ರಣದ ಉಳಿಸುವಿಕೆ**:— ಕೊನೆಯ ಹಿಂದಿನ ನಾಲ್ಕು ಪ್ರಕರಣಗಳಲ್ಲಿ ಇರುವುದಾವುದೂ, ಅವುಗಳಲ್ಲಿ ಉಲ್ಲೇಖಿಸಿದ ವಿಷಯಗಳ ಮೇಲೆ ಜಿಲ್ಲಾ ಮಾಜಿಸ್ಟ್ರೇಟನ ಸಾಮಾನ್ಯ ನಿಯಂತ್ರಣದೊಂದಿಗೆ ಹಸ್ತಕ್ಷೇಪ ಮಾಡುತ್ತದೆಂದು, ಭಾವಿಸತಕ್ಕದ್ದಲ್ಲ.

**34. ರಸ್ತೆಗಳಲ್ಲಿ ನಡೆಯುವ ಕೆಲವು ಅಪರಾಧಗಳಿಗಾಗಿ ದಂಡನೆ, ಇತ್ಯಾದಿ.—ಪೊಲೀಸು ಅಧಿಕಾರಿಗಳ ಅಧಿಕಾರ**:— ಈ ಪ್ರಕರಣವನ್ನು ರಾಜ್ಯಸರ್ಕಾರವು ವಿಶೇಷವಾಗಿ ವ್ಯಾಪ್ತಗೊಳಿಸತಕ್ಕಂಥ ಯಾವುದೇ ಪಟ್ಟಣದಪರಿಮಿತಿಯೊಳಗಿನ ಯಾವುದೇ ರಸ್ತೆಯಲ್ಲಿ ಅಥವಾ ಯಾವುವೇ ಬಹಿರಂಗ ಸ್ಥಳ ಅಥವಾ ಬೀದಿ ಅಥವಾ ಮುಖ್ಯಬೀದಿಯಲ್ಲಿ ನಿವಾಸಿಗಳು ಅಥವಾ ಪ್ರಯಾಣಿಕರಿಗೆ ಅಡ್ಡಿ, ಅನಾನುಕೂಲ, ಕಿರುಕುಳ, ಹಾನಿಸಂಭವ, ಅಪಾಯ ಅಥವಾ ಹಾನಿಯನ್ನುಂಟುಮಾಡುವ ಕೆಳಕಂಡ ಯಾವುದೇ ಅಪರಾಧವನ್ನು ಮಾಡುವ ಯಾವನೇ ವ್ಯಕ್ತಿಯು ಮಾಜಿಸ್ಟ್ರೇಟನ ಮುಂದೆ ಅಪರಾಧ ನಿರ್ಣಯವಾದ ಮೇಲೆ ಐವತ್ತು ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಅಥವಾ ಎಂಟು ದಿವಸಗಳಿಗೆ ಮೀರದ ಕಠಿಣ ಶ್ರಮ ಸಹಿತ ಅಥವಾ ಅದಿಲ್ಲದ ಕಾರಾವಾಸಕ್ಕೆ ಗುರಿಯಾಗತಕ್ಕದ್ದು ಮತ್ತು ಯಾವನೇ ಪೊಲೀಸ್ ಅಧಿಕಾರಿಗೆ ಅವನ ದೃಷ್ಟಿಯಲ್ಲಿ ಅಂಥ ಯಾವುದೇ ಅಪರಾಧವನ್ನು ಮಾಡುವ ಯಾವನೇ ವ್ಯಕ್ತಿಯನ್ನು ವಾರಂಟ್ ಇಲ್ಲದೆ ಅಭಿರಕ್ಷೆಗೆ ತೆಗೆದುಕೊಳ್ಳುವುದು ಕಾನೂನುಬದ್ಧವಾಗಿರತಕ್ಕದ್ದು, ಎಂದರೆ.—

**ಒಂದನೆಯದು— ಜಾನುವಾರನ್ನು ಕೊಲ್ಲುವುದು ಮತ್ತು ರೋಷಾವೇಶದ ಸವಾರಿ ಮಾಡುವುದು, ಇತ್ಯಾದಿ**:— ಯಾವುದೇ ಜಾನುವಾರನ್ನು ಕೊಲ್ಲುವ ಅಥವಾ ಯಾವುದೇ ಪ್ರಾಣಿಯ ಶವವನ್ನು ಸ್ವಚ್ಛಗೊಳಿಸುವ ಯಾವನೇ ವ್ಯಕ್ತಿ; ಎಚ್ಚರಗೇಡಿಯಾಗಿ ಅಥವಾ ರೋಷಾವೇಶದಿಂದ ಯಾವುದೇ ಜಾನುವಾರನ್ನು ಸವಾರಿ ಮಾಡುವ ಅಥವಾ ಓಡಿಸುವ ಅಥವಾ ಯಾವುದೇ ಕುದುರೆ ಅಥವಾ ಇತರ ಜಾನುವಾರನ್ನು ತರಬೇತು ಮಾಡುವ ಅಥವಾ ಪಳಗಿಸುವ ಯಾವನೇ ವ್ಯಕ್ತಿ:

**ಎರಡನೆಯದು—ಪ್ರಾಣಿಗಳ ಬಗ್ಗೆ ಕ್ರೌರ್ಯ**:— ಯಾವುದೇ ಪ್ರಾಣಿಯನ್ನು ಉದ್ದೇಶಪೂರ್ವಕವಾಗಿ ಅಥವಾ ಕ್ರೂರವಾಗಿ ಹೊಡೆಯುವ, ದುರುಪಯೋಗಿಸಿಕೊಳ್ಳುವ, ಚಿತ್ರಹಿಂಸೆ ಮಾಡುವ ಯಾವನೇ ವ್ಯಕ್ತಿ:

**ಮೂರನೆಯದು—ಪ್ರಯಾಣಿಕರಿಗೆ ಅಡ್ಡಿಪಡಿಸುವುದು**:— ಭಾರ ಹೇರುವುದಕ್ಕಾಗಿ ಅಥವಾ ಭಾರ ಇಳಿಸುವುದಕ್ಕಾಗಿ ಅಥವಾ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಅಥವಾ ಇಳಿಸಲು ಅಗತ್ಯವಿರುವುದಕ್ಕಿಂತ ಹೆಚ್ಚು ಕಾಲದವರೆಗೆ ಯಾವುದೇ ಜಾನುವಾರು ಅಥವಾ ಯಾವುದೇ ಬಗೆಯ ಸಾರಿಗೆ ವಾಹನವನ್ನು ನಿಲ್ಲಿಸಿಟ್ಟುಕೊಳ್ಳುವ ಅಥವಾ ಸಾರ್ವಜನಿಕರಿಗೆ ಅನಾನುಕೂಲ ಅಥವಾ ಅಪಾಯವುಂಟಾಗುವಂಥ ರೀತಿಯಲ್ಲಿ ಯಾವುದೇ ಸಾರಿಗೆ ವಾಹನವನ್ನು ಬಿಡುವ ಯಾವನೇ ವ್ಯಕ್ತಿ:

**ನಾಲ್ಕನೆಯದು ಮಾರಾಟಕ್ಕಾಗಿ ಸರಕುಗಳನ್ನು ಇಡುವುದು**:—ಯಾವುದೇ ಸರಕುಗಳನ್ನು ಮಾರಾಟಕ್ಕಾಗಿ ಇಡುವ ಯಾವನೇ ವ್ಯಕ್ತಿ:

ಐದನೆಯದು— ಬೀದಿಗೆ ಕಸ ಎಸೆಯುವುದು:— ಕಸ, ಹೊಲಸು, ಕೊಳೆ ಅಥವಾ ಯಾವುದೇ ಕಲ್ಲುಗಳು ಅಥವಾ ಕಟ್ಟಡದ ಸಾಮಗ್ರಿಗಳನ್ನು ಎಸೆಯುವ ಅಥವಾ ಹಾಕುವ ಅಥವಾ ದನದ ಕೊಟ್ಟಿಗೆ, ಬಾಯಿ ಅಥವಾ ಅಂಥವುಗಳನ್ನು ನಿರ್ಮಿಸುವ ಅಥವಾ ಯಾವುದೇ ಮನೆ, ಕಾರ್ಖಾನೆ, ಸಗಣಿಗುಪ್ಪೆ ಅಥವಾ ಅಂಥದರಿಂದ ಯಾವುದೇ ಹೊಲಸು ವಸ್ತುವು ಹರಿಯುವಂತೆ ಮಾಡುವ ಯಾವನೇ ವ್ಯಕ್ತಿ:

ಆರನೆಯದು_ಪಾನಮತ್ತನಾಗಿ ಅಥವಾ ದೊಂಬಿಕಾರಕನಾಗಿ ಕಂಡುಬರುವುದು:—ಪಾನಮತ್ತನಾಗಿ ಅಥವಾ ದೊಂಬಿಕೋರನಾಗಿ ಕಂಡುಬರುವ ಅಥವಾ ಅವನು ತನ್ನನ್ನೆ ಸಂಭಾಳಿಸಿಕೊಳ್ಳಲು ಅಸಮರ್ಥನಾಗಿರುವ ಯಾವನೇ ವ್ಯಕ್ತಿ:

ಏಳನೆಯದು— ದೇಹವನ್ನು ಅಸಭ್ಯವಾಗಿ ತೋರಿಸುವುದು:— ತನ್ನ ದೇಹ ಅಥವಾ ಅಸಹ್ಯ ಅಂಗವಿರೂಪತೆ ಅಥವಾ ಕಾಯಿಲೆಯನ್ನು ಉದ್ದೇಶಪೂರ್ವಕವಾಗಿ ಮತ್ತು ಅಸಭ್ಯವಾಗಿ ತೋರಿಸುವ ಅಥವಾ ದೇಹಭಾದೆ ತೀರಿಸಿಕೊಳ್ಳುವ ಅಥವಾ ಸ್ನಾನಮಾಡುವ ಅಥವಾ ಬಟ್ಟೆ ಒಗೆಯುವ ಉದ್ದೇಶಕ್ಕಾಗಿ ಪ್ರತ್ಯೇಕವಾಗಿಡದ ಯಾವುದೇ ಕೆರೆ ಅಥವಾ ಜಲಾಶಯದಲ್ಲಿ ಸ್ನಾನ ಮಾಡುವ ಅಥವಾ ಬಟ್ಟೆ ಒಗೆಯುವ ಮೂಲಕ ಉಪದ್ರವವನ್ನುಂಟುಮಾಡುವ ಯಾವನೇ ವ್ಯಕ್ತಿ:

ಎಂಟನೆಯದು— ಅಪಾಯಕಾರಿ ಸ್ಥಳಗಳನ್ನು ಸಂರಕ್ಷಿಸಲು ಉಪೇಕ್ಷೆ:— ಯಾವುದೇ ಬಾವಿ, ಕೆರೆ ಅಥವಾ ಇತರ ಅಪಾಯಕಾರಿ ಸ್ಥಳ ಅಥವಾ ನಿರ್ಮಿತಿಗೆ ಬೇಲಿ ಹಾಕಲು ಅಥವಾ ಅದನ್ನು ಸರಿಯಾಗಿ ಸಂರಕ್ಷಿಸಲು ಉಪೇಕ್ಷೆ ಮಾಡುವ ಯಾವನೇ ವ್ಯಕ್ತಿ.

**35**. ಅಧಿಕಾರ ವ್ಯಾಪ್ತಿ:— ಈ ಅಧಿನಿಯಮದ ಮೇರೆಗೆ ಕಾನ್‌ಸ್ಟೇಬಲ್ ದರ್ಜೆಗೆ ಮೇಲ್ಪಟ್ಟ ಪೊಲೀಸ್ ಅಧಿಕಾರಿಯು ವಿರುದ್ಧದ ಯಾವುದೇ ಆರೋಪವನ್ನು ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಚಲಾಯಿಸುವ ಅಧಿಕಾರಿಯು ಮಾತ್ರವೇ ವಿಚಾರಣೆ ಮಾಡತಕ್ಕುದು ಮತ್ತು ನಿರ್ಧರಿಸತಕ್ಕುದು.

**36**. ಇತರ ಕಾನೂನಿನ ಮೇರೆಗೆ ಪ್ರಾಸಿಕ್ಯೂಷನ್ ಮಾಡುವ ಅಧಿಕಾರಕ್ಕೆ ಬಾಧಕವಾಗತಕ್ಕುದಲ್ಲ:—ಈ ಅಧಿನಿಯಮದಲ್ಲಿ ಅಡಕವಾಗಿರುವುದು ಯಾವುದೂ ಯಾವನೇ ವ್ಯಕ್ತಿಯನ್ನು ಈ ಅಧಿನಿಯಮದ ಮೂಲಕ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ ಯಾವುದೇ ಇತರ ರೆಗ್ಯುಲೇಷನ್ ಅಥವಾ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಷನಿಗೆ ಒಳಪಡಿಸುವುದನ್ನು ಅಥವಾ ಯಾವುದೇ ಇತರ ರೆಗ್ಯುಲೇಷನ್ ಅಥವಾ ಅಧಿನಿಯಮದ ಮೇರೆಗೆ ಅಥವಾ ಈ ಅಧಿನಿಯಮದ ಮೂಲಕ ಅಂಥ ಅಪರಾಧಕ್ಕಾಗಿ ಉಪಬಂಧಿಸಿರುವುದನ್ನು ಹೊರತುಪಡಿಸಿ ಯಾವುದೇ ಇತರ ಅಥವಾ ಹೆಚ್ಚಿನ ದಂಡನೆಗೆ ಗುರಿಪಡಿಸುವುದನ್ನು ಪ್ರತಿಬಂಧಿಸುವುದೆಂದು ಅರ್ಥೈಸತಕ್ಕುದಲ್ಲ:

ಪರಂತುಕ: ಪರಂತು, ಅದೇ ಅಪರಾಧಕ್ಕಾಗಿ ಯಾವನೇ ವ್ಯಕ್ತಿಯನ್ನು ಎರಡು ಬಾರಿ ದಂಡಿಸತಕ್ಕುದಲ್ಲ.

**37**. ಮ್ಯಾಜಿಸ್ಟ್ರೇಟರುಗಳು ವಿಧಿಸಿದ ದಂಡನೆಗಳು ಮತ್ತು ಜುಲ್ಮಾನೆಗಳ ವಸೂಲಿ:—ಜುಲ್ಮಾನೆಗಳಿಗೆ ಸಂಬಂಧಿಸಿದಂತೆ ಭಾರತ ದಂಡ ಸಂಹಿತೆಯ (1860ರ 45) 64ರಿಂದ 70ನೇ ಪ್ರಕರಣಗಳು ಎರಡೂ ಸೇರಿ ಮತ್ತು ದಂಡ ಪ್ರಕ್ರಿಯಾ ಸಂಹಿತೆ 1882ರ (1882ರ 10) 386 ರಿಂದ 389ನೇ ಪ್ರಕರಣಗಳ ಎರಡೂ ಸೇರಿ ಉಪಬಂಧಗಳು, ಮ್ಯಾಜಿಸ್ಟ್ರೇಟನ ಮುಂದೆ ಅಪರಾಧ ನಿರ್ಣಯವಾದ ಮೇಲೆ ಈ ಅಧಿನಿಯಮದ ಮೇರೆಗೆ ವಿಧಿಸಿದ ದಂಡನೆಗಳು ಮತ್ತು ಜುಲ್ಮಾನೆಗಳಿಗೆ ಅನ್ವಯವಾಗತಕ್ಕುದು:

ಪರಂತು, ಮೊದಲು ಹೇಳಿದ ಸಂಹಿತೆಯ 65ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ 34ನೇ ಪ್ರಕರಣದ ಮೇರೆಗೆ ಜುಲ್ಮಾನೆಯ ಶಿಕ್ಷೆಗೆ ಗುರಿಯಾದ ಯಾವನೇ ವ್ಯಕ್ತಿಯನ್ನು ಅಂಥ ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ ಎಂಟು ದಿವಸಗಳಿಗೆ ಮೀರದ ಯಾವುದೇ ಅವಧಿಗೆ ಕಾರಾಗೃಹದಲ್ಲಿ ಇಡಬಹುದು.

**38**. ಜಪ್ತಿಯ ವಾರಂಟನ್ನು ಹಿಂತಿರುಗಿಸುವವರೆಗೆ ಪ್ರಕ್ರಿಯೆ:—ಪೊಲೀಸು ಅಧಿನಿಯಮ (1861) ತಿದ್ದುಪಡಿ ಅಧಿನಿಯಮ, 1895 (1895ರ 8) ಪ್ರಕರಣ 14ರ ಮೂಲಕ ನಿರಸನಗೊಳಿಸಲಾಗಿದೆ.

**39**. (ಜಪ್ತಿಯು ಸಾಕಷ್ಟಿಲ್ಲದಿದ್ದರೆ ಕಾರಾವಾಸ)—ಮೇಲಿನಂತೆ ನಿರಸನಗೊಳಿಸಲಾಗಿದೆ.

**40**. (ಯುರೋಪಿಯನ್ ಬ್ರಿಟಿಷ್ ಪ್ರಜೆಗಳಿಂದ ಜುಲ್ಮಾನೆಗಳ ವಸೂಲಿ). —ಮೇಲಿನಂತೆ ನಿರಸನಗೊಳಿಸಲಾಗಿದೆ.

**41**. (ಪೊಲೀಸ್ ಮತ್ತು ಮಾಹಿತಿ ಕೊಡುವವರಿಗೆ ಸಂದಾಯ ಮಾಡಬೇಕಾದ ಪಾರಿತೋಷಕಗಳನ್ನು ಸಾಮಾನ್ಯ ಪೊಲೀಸ್ ನಿಧಿಗೆ ಸಂದಾಯ ಮಾಡಬೇಕು)—ಎ.ಓ. 1937ರ ಮೂಲಕ ನಿರಸನಗೊಳಿಸಲಾಗಿದೆ.

**42**. ಕ್ರಮಗಳ ಬಗ್ಗೆ ಕಾಲ ಪರಿಮಿತಿ:—ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಈ ಮೂಲಕ ಕೊಟ್ಟಿರುವ ಸಾಮಾನ್ಯ ಪೊಲೀಸ್ ಅಧಿಕಾರಗಳ ಮೇರೆಗೆ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ಧ ಕಾನೂನು ಬದ್ಧವಾಗಿ ತರಬಹುದಾದಂಥ ಎಲ್ಲಾ ಕ್ರಮಗಳು ಮತ್ತು ಪ್ರಾಸಿಕ್ಯೂಷನ್‌ಗಳನ್ನು ದೂರಿದ ಕಾರ್ಯವನ್ನು ಮಾಡಿದ ತರುವಾಯ ಮೂರು ತಿಂಗಳುಗಳ ಒಳಗೆ ಪ್ರಾರಂಭಿಸತಕ್ಕುದು ಮತ್ತು ಅನ್ಯಥಾ ಅಲ್ಲ ಮತ್ತು ಅಂಥ ಕ್ರಮದ ಬಗ್ಗೆ ಮತ್ತು ಅದರ ಕಾರಣದ ಬಗ್ಗೆ ಬರಹದಲ್ಲಿನ ನೋಟೀಸನ್ನು ಪ್ರತಿವಾದಿಗೆ ಅಥವಾ ಆ ಕಾರ್ಯವನ್ನು ಯಾವ ಜಿಲ್ಲೆಯಲ್ಲಿ ಮಾಡಲಾಗಿದೆಯೋ ಆ ಜಿಲ್ಲೆಯ ಸೂಪರಿಂಟೆಂಡೆಂಟ್ ಅಥವಾ ಆ ಜಿಲ್ಲೆಯ ಸಹಾಯಕ ಸೂಪರಿಂಟೆಂಡೆಂಟನಿಗೆ ಆ ಕ್ರಮವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಕನಿಷ್ಠ ಒಂದು ತಿಂಗಳ ಮುಂಚೆ ಕೊಡತಕ್ಕುದು.

ಸಾಕಷ್ಟು ಪರಿಹಾರಗಳನ್ನು ಕೊಡಮಾಡುವುದು:—ಯಾವುದೇ ಅಂಥ ಕ್ರಮದಲ್ಲಿ, ತಂದ ಅಂಥ ಕ್ರಮಕ್ಕೆ ಮುಂಚೆ ಸಾಕಷ್ಟು ಪರಿಹಾರವನ್ನು ಕೊಡಮಾಡಿದ್ದರೆ ಅಥವಾ ನ್ಯಾಯಾಲಯಕ್ಕೆ ಸಾಕಷ್ಟು ಹಣದ ಮೊತ್ತವನ್ನು ಪ್ರತಿವಾದಿಯು ಅಥವಾ ಅವನ ಪರವಾಗಿ ಸಂದಾಯ ಮಾಡಿದ್ದರೆ ಮತ್ತು ಯಾವುದೇ ಅಂಥ ಕ್ರಮದಲ್ಲಿ ವಾದಿಗೆ ಡಿಕ್ರಿಯನ್ನು ಕೊಡತಕ್ಕುದಾದಾಗ್ಯೂ ಅಂಥ ವಾದಿಯು ಆ ಪ್ರತಿವಾದಿಯ ವಿರುದ್ಧ ಅಧಿವಿಚಾರಣೆಯನು ಯಾರ ಮುಂದೆ ನಡೆಸಲಾಯಿತೋ ಆ ನ್ಯಾಯಾಧೀಶನು ಆ ಕ್ರಮಕ್ಕೆ ಅವನ ಸಮ್ಮತಿಯನ್ನು ಪ್ರಮಾಣೀಕರಿಸಿದ ಹೊರತು ಖರ್ಚನ್ನು ಪಡೆಯತಕ್ಕುದಲ್ಲ.

ಪರಂತು ಯಾವತ್ತೂ, ಅಂಥ ಅಧಿಕಾರಿಗಳನ್ನು ಅದೇ ಕಾರ್ಯಕ್ಕಾಗಿ ಅಪರಾಧಿಕವಾಗಿ ಪ್ರಾಸಿಕ್ಯೂಟ್ ಮಾಡಲಾಗಿರುವ ಯಾವುದೇ ಸಂದರ್ಭದಲ್ಲಿ ಯಾವುದೇ ಕ್ರಮವನ್ನು ಹೂಡತಕ್ಕುದಲ್ಲ.

**43. ಕಾರ್ಯವನ್ನು ವಾರಂಟಿನ ಮೇರೆಗೆ ಮಾಡಲಾಗಿದೆಯೆಂದು ವಾದ:**—ಯಾವನೇ ಪೊಲೀಸ್ ಅಧಿಕಾರಿಯ ವಿರುದ್ಧ ಅಂಥ ನಾತೆಯಲ್ಲಿ ಅವನು ಮಾಡಿದ ಯಾವುದೇ ಕಾರ್ಯಕ್ಕಾಗಿ ಯಾವುದೇ ಕ್ರಮವನ್ನು ಅಥವಾ ಪ್ರಾಸಿಕ್ಯೂಷನನ್ನು ತಂದಾಗ ಅಥವಾ ಯಾವುದೇ ವ್ಯವಹರಣೆಗಳನ್ನು ನಡೆಸಿದಾಗ ಮ್ಯಾಜಿಸ್ಟ್ರೇಟನು ಕೊಟ್ಟ ವಾರಂಟಿನ ಅಧಿಕಾರದ ಮೇರೆಗೆ ಅಂಥ ಕಾರ್ಯವನ್ನು ತಾನು ಮಾಡಿದೆನೆಂದು ವಾದಿಸುವುದು ಅವನಿಗೆ ಕಾನೂನು ಸಮ್ಮತವಾಗಿರತಕ್ಕದು.

ಅಂಥ ವಾದವನ್ನು ಅಂಥ ಕಾರ್ಯವನ್ನು ನಿರ್ದೇಶಿಸಿ ಮ್ಯಾಜಿಸ್ಟ್ರೇಟನು ರುಜು ಮಾಡಿರುವುದಾಗಿ ತಾತ್ಪರ್ಯವಾಗುವ ವಾರೆಂಟನ್ನು ಹಾಜರುಪಡಿಸುವ ಮೂಲಕ ರುಜುವಾತುಪಡಿಸತಕ್ಕದು ಮತ್ತು ಆ ತರುವಾಯ ಪ್ರತಿವಾದಿಯು ಅಂಥ ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಯಲ್ಲಿ ಯಾವುದೇ ನ್ಯೂನತೆ ಇದ್ದಾಗ್ಯೂ, ತನ್ನ ಪರವಾಗಿ ಡಿಕ್ರಿಗೆ ಹಕ್ಕುಳ್ಳವನಾಗಿರತಕ್ಕದು, ಅಂಥ ಮ್ಯಾಜಿಸ್ಟ್ರೇಟನ ರುಜುವಿನ ಯಾವುದೇ ರುಜುವಾತು, ಅದು ನೈಜವಾಗಿದೆಯೆಂದು ಶಂಕಿಸಲು ಆ ನ್ಯಾಯಾಲಯಕ್ಕೆ ಕಾರಣವು ಕಂಡುಬಂದ ಹೊರತು ಅವಶ್ಯವಾಗಿರತಕ್ಕದ್ದಲ್ಲ:

ಯಾವಾಗಲೂ ಪರಂತು, ಅಂಥ ವಾರಂಟನ್ನು ಹೊರಡಿಸುವ ಪ್ರಾಧಿಕಾರಿಯ ವಿರುದ್ಧ ಪಕ್ಷಕಾರನು ಹೊಂದಿರ ಬಹುದಾದಂಥ ಯಾವುದೇ ಪರಿಹಾರೋಪಾಯವು ಈ ಪ್ರಕರಣದಲ್ಲಿ ಅಡಕವಾಗಿರುವುದರಿಂದಲೂ ಬಾಧಿತವಾಗತಕ್ಕದ್ದಲ್ಲ.

**44. ಪೊಲೀಸ್ ಅಧಿಕಾರಿಗಳು ಡೈರಿಯನ್ನು ಇಡುವುದು:**—ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸತಕ್ಕ ನಮೂನೆಯಲ್ಲಿ ಸಾಮಾನ್ಯ ಡೈರಿಯನ್ನು ಇಡುವುದು ಮತ್ತು ಅದರಲ್ಲಿ ಸಲ್ಲಿಸಲಾದ ದೂರುಗಳು, ಆರೋಪಗಳು, ದಸ್ತಗಿರಿ ಮಾಡಲಾದ ಎಲ್ಲಾ ವ್ಯಕ್ತಿಗಳ ಹೆಸರುಗಳು, ಫಿರ್ಯಾದಿಕಾರರ ಹೆಸರುಗಳು, ಅವರ ಮೇಲೆ ಹೊರಿಸಿದ ಅಪರಾಧಗಳು, ಅವರ ಸ್ವಾಧೀನದಿಂದ ಅಥವಾ ಅನ್ಯಥಾ ತೆಗೆದುಕೊಳ್ಳಲಾದ ಆಯುಧಗಳು ಅಥವಾ ಸ್ವತ್ತು ಮತ್ತು ಪರೀಕ್ಷಿಸಲಾಗಿರುವ ಸಾಕ್ಷಿದಾರರ ಹೆಸರುಗಳು ಇವುಗಳನ್ನು ದಾಖಲು ಮಾಡುವುದು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯ ಕರ್ತವ್ಯವಾಗಿರತಕ್ಕುದು. ಅಂಥ ಡೈರಿಯನ್ನು ತರಿಸಿಕೊಳ್ಳಲು ಮತ್ತು ಪರಿಶೀಲಿಸಲು ಜಿಲ್ಲಾ ಮ್ಯಾಜಿಸ್ಟ್ರೇಟನು ಸ್ವತಂತ್ರನಾಗಿರತಕ್ಕದು.

**45. ರಾಜ್ಯ ಸರ್ಕಾರವು ವಿವರಪಟ್ಟಿಕೆಗಳ ನಮೂನೆಯನ್ನು ನಿಯಮಿಸಬಹುದು:**—ರಾಜ್ಯ ಸರ್ಕಾರವು ಅದಕ್ಕೆ ಸೂಕ್ತವೆಂದು ಕಂಡುಬರತಕ್ಕಂಥ ವಿವರಪಟ್ಟಿಕೆಗಳನ್ನು ಇನ್ಸ್‌ಪೆಕ್ಟರ್ ಜನರಲ್ಲನು ಮತ್ತು ಇತರ ಪೊಲೀಸ್ ಅಧಿಕಾರಿಗಳು ಸಲ್ಲಿಸಬೇಕೆಂದು ನಿರ್ದೇಶಿಸಬಹುದು ಮತ್ತು ಅಂಥ ವಿವರಪಟ್ಟಿಕೆಗಳನ್ನು ಸಲ್ಲಿಸತಕ್ಕಂಥ ನಮೂನೆಯನ್ನು ನಿಯಮಿಸಬಹುದು.

**46. ಅಧಿನಿಯಮದ ವ್ಯಾಪ್ತಿ:**—ಈ ಅಧಿನಿಯಮವು, ಅದರ ಸ್ವಂತ ಪ್ರವರ್ತನೆಯ ಮೂಲಕ ಯಾವುದೇ ಪ್ರೆಸಿಡೆನ್ಸಿ, ರಾಜ್ಯ ಅಥವಾ ಸ್ಥಳದಲ್ಲಿ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದರೆ ರಾಜ್ಯಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಬೇಕಾದ ಆದೇಶದ ಮೂಲಕ ಈ ಅಧಿನಿಯಮವನ್ನು ಇಡಿಯಾಗಿ ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ಪ್ರೆಸಿಡೆನ್ಸಿ, ರಾಜ್ಯ ಅಥವಾ ಸ್ಥಳಕ್ಕೆ ವ್ಯಾಪ್ತಗೊಳಿಸಬಹುದು ಮತ್ತು ಈ ಅಧಿನಿಯಮವು ಆ ತರುವಾಯ ಸಂಪೂರ್ಣವಾಗಿ ಅಥವಾ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದಾದಂಥ ಭಾಗವು ಅಂಥ ಪ್ರೆಸಿಡೆನ್ಸಿ, ರಾಜ್ಯ ಅಥವಾ ಸ್ಥಳದಲ್ಲಿ ಪರಿಣಾಮಕಾರಿಯಾಗತಕ್ಕದು.

(2) ಈ ಅಧಿನಿಯಮವನ್ನು ಇಡಿಯಾಗಿ ಅಥವಾ ಅದರ ಯಾವುದೇ ಭಾಗವನ್ನು ಹಾಗೆ ವ್ಯಾಪ್ತಗೊಳಿಸಿರುವಾಗ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ—

(ಕ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಮ್ಯಾಜಿಸ್ಟ್ರೇಟರುಗಳು ಮತ್ತು ಪೊಲೀಸು ಅಧಿಕಾರಿಗಳು ಮೇಲೆ ವಿಧಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವಲ್ಲಿ ಅವರು ಅನುಸರಿಸಬೇಕಾದ ಪ್ರಕ್ರಿಯೆಯನ್ನು ವಿನಿಯಮಿಸಲು,

(ಖ) 15ಕ ಪ್ರಕರಣದ ಮೇರೆಗೆ ನಷ್ಟಪರಿಹಾರಕ್ಕಾಗಿನ ಕ್ಲೇಮುಗಳನ್ನು ಯಾವ ಕಾಲದೊಳಗೆ ಮತ್ತು ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳ ಮೇರೆಗೆ ಮಾಡಬೇಕಾಗಿದೆಯೋ ಆ ಕಾಲ, ರೀತಿ ಮತ್ತು ಷರತ್ತುಗಳನ್ನು ಅಂಥ ಕ್ಲೇಮುಗಳಲ್ಲಿ ನಮೂದಿಸಬೇಕಾದ ವಿವರಗಳು, ಅವುಗಳನ್ನು ಸತ್ಯಾಪಿಸಬೇಕಾದಂಥ ರೀತಿ ಮತ್ತು ತತ್ಪರಿಣಾಮವಾಗಿ ಅದರ ಮೇಲೆ ತೆಗೆದುಕೊಳ್ಳಬೇಕಾದಂಥ ವ್ಯವಹರಣೆಗಳನ್ನು (ಅವಶ್ಯಕವಾದರೆ ಸ್ಥಳೀಯ ವಿಚಾರಣೆಗಳು ಸೇರಿದಂತೆ) ಇವುಗಳನ್ನು ನಿಯಮಿಸಲು; ಮತ್ತು

(ಗ) ಸಾಮಾನ್ಯವಾಗಿ ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸುವುದಕ್ಕಾಗಿ ಈ ಅಧಿನಿಯಮಕ್ಕೆ ಸುಸಂಗತವಾಗುವ ಹಾಗೆ, ನಿಯಮವನ್ನು ರಚಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಎಲ್ಲಾ ನಿಯಮಗಳನ್ನು ರಾಜ್ಯ ಸರ್ಕಾರವು ಕಾಲಕಾಲಕ್ಕೆ ತಿದ್ದುಪಡಿ ಮಾಡಬಹುದು, ಸೇರಿಸಬಹುದು ಅಥವಾ ರದ್ದು ಮಾಡಬಹುದು.

**47. ಗ್ರಾಮ ಪೊಲೀಸಿನ ಮೇಲೆ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟನ ಅಧಿಕಾರ:**—ರಾಜ್ಯ ಸರ್ಕಾರಕ್ಕೆ ಒಳಪಟ್ಟ ರಾಜ್ಯ ಕ್ಷೇತ್ರಗಳ ಯಾವುದೇ ಭಾಗದಲ್ಲಿ ಈ ಅಧಿನಿಯಮವನ್ನು ಕಾರ್ಯಗತಗೊಳಿಸುವಲ್ಲಿ ಪೊಲೀಸ್ ಉದ್ದೇಶಗಳಿಗಾಗಿ ಯಾವುದೇ ಗ್ರಾಮ-ಕಾವಲುಗಾರ ಅಥವಾ ಇತರ ಗ್ರಾಮ ಪೊಲೀಸ್ ಅಧಿಕಾರಿಯ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟನು ಯಾವ ಅಧಿಕಾರವನ್ನು ಚಲಾಯಿಸುತ್ತಿರುವನೋ ಅಥವಾ ಚಲಾಯಿಸಬಹುದೋ ಆ ಯಾವುದೇ ಅಧಿಕಾರವನ್ನು ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟನು ಜಿಲ್ಲಾ ಮ್ಯಾಜಿಸ್ಟ್ರೇಟನ ನಿಯಂತ್ರಣಕ್ಕೊಳಪಟ್ಟು ಚಲಾಯಿಸತಕ್ಕದು ಎಂದು ಘೋಷಿಸಲು ರಾಜ್ಯ ಸರ್ಕಾರಕ್ಕೆ ಕಾನೂನು ಬದ್ಧವಾಗಿರತಕ್ಕದು.

## ನಮೂನೆ

(8ನೇ ಪ್ರಕರಣವನ್ನು ನೋಡಿ)

ಕ.ಖ.ನನ್ನು 1861ರ ಅಧಿನಿಯಮ 5ರ ಮೇರೆಗೆ ಪೊಲೀಸ್ ದಳದ ಸದಸ್ಯನನ್ನಾಗಿ ನೇಮಕ ಮಾಡಲಾಗಿದೆ ಮತ್ತು ಅವನಲ್ಲಿ ಪೊಲೀಸ್ ಅಧಿಕಾರಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ವಿಶೇಷಾಧಿಕಾರಗಳನ್ನು ನಿಹಿತಗೊಳಿಸಲಾಗಿದೆ.